ಸಾಧ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ

ಎಲ್. ಶಿವಲಿಂಗಪ್ಪ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ



ಎಲ್. ಶಿವಲಿಂಗಪ್ಪ

ಬಹುಮುಖ ಪ್ರತಿಭೆಯ ಎಲ್. ಶಿವಲಿಂಗಪ್ಪನವರು ಸಾಹಿತ್ಯ, ಚಿತ್ರ, ಶಿಲ್ಪ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿರುವ ಇವರು ಮೈಸೂರಿನ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳ ಗುರುಕುಲದಲ್ಲಿ ಚಿತ್ರ ಮತ್ತು ಶಿಲ್ಪಗಳ ಅಭ್ಯಾಸ ಮಾಡಿ, ನಂತರ ಬೆಂಗಳೂರಿನ ಎಂ.ಟಿ.ವಿ. ಆಚಾರ್ಯರವರಲ್ಲಿ ಉನ್ನತ ಕಲಾ ಶಿಕ್ಷಣ ಪಡೆದಿದ್ದಾರೆ.

ರಾಜ್ಯ ಮತ್ತು ಹೊರ ರಾಜ್ಯದ ಹಲವಾರು ಕಲಾ ಪ್ರದರ್ಶನ ಮತ್ತು ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಅಲ್ಲದೆ ಅನೇಕ ಮರಳಚ್ಚಿನ ಶಿಲ್ಪಗಳನ್ನು ರಚಿಸಿ, ಪ್ರದರ್ಶಿಸಿ, ಖ್ಯಾತಿ ಪಡೆದಿದ್ದಾರೆ ಹಾಗೂ ಇವರು ಥರ್ಮಾಕೋಲ್‌ನಲ್ಲಿ ಅನೇಕ ಶಿಲ್ಪಗಳನ್ನು ರಚಿಸಿದ್ದಾರೆ. ಇವರು ಬರೆದ ಅನೇಕ ಲೇಖನಗಳು, ಕಲಾ ವಿಮರ್ಶೆಗಳು ನಾಡಿನ ಪ್ರಮುಖ ಪತ್ರಿಕೆಗಳಾದ ಸುಧಾ, ಪ್ರಜಾವಾಣಿ, ಉದಯವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇವರು ಉತ್ತಮ ಛಾಯಾಗ್ರಾಹಕರಾಗಿರುವುದರಿಂದ ಲೇಖನಕ್ಕೆ ಪೂರಕವಾದ ಚಿತ್ರಗಳನ್ನು ಒದಗಿಸುತ್ತಾರೆ.

ಬೆಂಗಳೂರಿನಲ್ಲಿ ವಸತಿ ಸೌಕರ್ಯವುಳ್ಳ ಕಲಾವಿದ್ಯಾಲಯ ಸ್ಥಾಪಿಸಿ, ಡಿ.ಎಂ.ಸಿ. ಡಿಪ್ಲೊಮೊ ಕಲಾ ಶಿಕ್ಷಣ ಪಡೆಯುವವರಿಗೆ ಅವಕಾಶವೊದಗಿಸಿದ್ದಾರೆ. ಎಂ.ಟಿ.ವಿ. ಆಚಾರ್ಯರವರು ಸ್ಥಾಪಿಸಿದ ಅಂಚೆ ಕಲಾಶಿಕ್ಷಣ ಸಂಸ್ಥೆಯ ಆಚಾರ್ಯ ಚಿತ್ರಕಲಾ ಭವನದ ಗೌರವ ಪ್ರಾಚಾರ್ಯರಾಗಿ ಅದರ ಉನ್ನತಿಗಾಗಿ ಶ್ರಮಿಸುತ್ತಿದ್ದಾರೆ. ಪ್ರಸ್ತುತ ಶಿಲ್ಪಕಲಾ ಅಕಾಡೆಮಿ ಸದಸ್ಯರಾಗಿರುವ ಎಲ್. ಶಿವಲಿಂಗಪ್ಪನವರು ಮೂಲತಃ ಮೈಸೂರಿನವರಾಗಿದ್ದು, ಶ್ರೀ ಸ್ವಾಮಿಗಳ ಹಾಗೂ ಶ್ರೀ ಸ್ಥಪತಿಯವರ ವ್ಯಕ್ತಿತ್ವ ದರ್ಶನವನ್ನು ಈ ಕಿರು ಪುಸ್ತಕದಲ್ಲಿ ಪರಿಚಯಿಸಿದ್ದಾರೆ.

ಶಿಲ್ಪಕಲಾವಿದರ ಮಾಲೆ - ೩

ಸಾಥ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ

ಎಲ್. ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡ ಭವನ
ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨

SATHVIKA SHILPI NAGENDRA STAPATHI
A Monograph by : L. Shivalingappa
Published by N. Marishamachar
Registrar, Karnataka Shilpakala Academy
Ist Floor, Kannada Bhavana, J.C. Road,
Bangalore - 560 002

ಮೊದಲ ಮುದ್ರಣ : 1999

ಪ್ರತಿಗಳು : 1000

ಸಂಪಾದಕ :
ಎನ್. ಮರಿಶಾಮಾಚಾರ್

ಬೆಲೆ : ರೂ. 15.00

ಮುದ್ರಕರು
ಪ್ರಗತಿ ಪ್ರಿಂಟ್ ಕಮ್ಯೂನಿಕೇಷನ್ಸ್
ಬೆಂಗಳೂರು
ದೂರವಾಣಿ : 3342724

ಮೊದಲ ಮಾತು

ನಮ್ಮ ರಾಜ್ಯ ಶಿಲ್ಪಕಲೆಗೆ ವಿಶ್ವದಲ್ಲೇ ಹೆಸರು ಪಡೆದಿದ್ದು, `ಶಿಲ್ಪಕಲೆಯ ತವರೂರು' ಎಂದು ಕರೆಯಲ್ಪಟ್ಟಿದೆ. ಈ ನಾಡಿನಲ್ಲಿ ಅನೇಕ ಶಿಲ್ಪ ಶೈಲಿಗಳು ಹುಟ್ಟಿ, ಅವು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿವೆ. ನಮ್ಮ ರಾಜ್ಯದಲ್ಲಿ ಶಿಲ್ಪಕಲೆಗಾಗಿ ದುಡಿದವರು ಹಲವಾರು ಶಿಲ್ಪಿಗಳು. ಕೆಲವು ಶಿಲ್ಪಿಗಳು 'ಶಿಲ್ಪ ರಚಿಸುವುದೇ ತಮ್ಮ ಕಾಯಕ'ವೆಂದು ತಿಳಿದು, ಶಿಲ್ಪದ ಮೇಲೆ ತಮ್ಮ ಹೆಸರುಗಳನ್ನು ನಮೂದಿಸಿರುವುದಿಲ್ಲ. ಸಾಂಪ್ರದಾಯಿಕವಾಗಿ ಶಿಲ್ಪಕಲೆ ಬೆಳೆದು ಬಂದಿದ್ದು ಇಂದಿಗೂ ಈ ಕಲೆಗಳನ್ನು ಉಳಿಸಿ, ಬೆಳೆಸಿಕೊಂಡು ಬಂದಿರುವವರು ನಮ್ಮಲ್ಲಿದ್ದಾರೆ. ಶಿಲ್ಪಕಲಾ ಅಕಾಡೆಮಿ ಇಂತಹ ಹಿರಿಯ ಶಿಲ್ಪಕಲಾವಿದರು ಮತ್ತು ಅವರ ಕೃತಿಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಪ್ರಾರಂಭಿಸಿದೆ. ಈ ಪುಸ್ತಕಗಳು ಈ ಶಿಲ್ಪಿಗಳ ಮತ್ತು ಕೃತಿಗಳ ಪರಿಚಯ ಮಾಡಿಸುವುದರ ಜೊತೆಗೆ ರಾಜ್ಯದಲ್ಲಿ ಶಿಲ್ಪಕಲೆ ಬೆಳೆದು ಬಂದ ದಾರಿ ಮತ್ತು ಅದರ ಚರಿತ್ರೆಯನ್ನು ತಿಳಿಯಲು ಸಹಾಯಕವಾಗುವುದು.

ನಾನು ಗುರುಕುಲದಲ್ಲಿದ್ದಾಗ, ಶ್ರೀ ನಾಗೇಂದ್ರ ಸ್ಥಪತಿಗಳು ಮತ್ತು ನಾನು ಒಟ್ಟಿಗೆ ಕೆಲಸ ಮಾಡುತ್ತಿದ್ದೆವು. ಅವರು ಪ್ರಾರಂಭದಲ್ಲಿ ಕಷ್ಟಪಟ್ಟು ದುಡಿದವರು, ಅನಂತರ ಸುಖಜೀವನ ನಡೆಸಿದವರು. ಚಿತ್ರ ಮತ್ತು ಶಿಲ್ಪ ಎರಡರಲ್ಲೂ ಸಿದ್ಧಹಸ್ತರಾಗಿದ್ದ ಶ್ರೀ ನಾಗೇಂದ್ರ ಸ್ತಪತಿಗಳು, ಮಠ ಬೆಳೆಯಲು ಮೂಲ ಪುರುಷರು. ಅವರು ಹಾಸ್ಯ ಪ್ರವೃತ್ತಿಯುಳ್ಳವರಾಗಿದ್ದು, ಆಗಾಗ ಅನೇಕ ಹಾಸ್ಯ ಚಟಾಕಿಗಳನ್ನು ಹೇಳುತ್ತಿದ್ದರು. ಇದರಿಂದ ನಮಗೆ ಸಮಯ


ಹೋಗುವುದು ಗೊತ್ತಾಗುತ್ತಿರಲಿಲ್ಲ. ಬೆಂಗಳೂರಿನಲ್ಲಿ ವಿಧಾನ ಸೌಧ ನಿರ್ಮಾಣ ಮಾಡುವಾಗ, ಅಂದಿನ ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ಕೆಂಗಲ್ ಹನುಮಂತಯ್ಯನವರೊಡನೆ ನೇರ ಸಂಪರ್ಕವಿಟ್ಟುಕೊಂಡಿದ್ದರು.

ಈ ಯೋಜನೆಯಲ್ಲಿ ನಮ್ಮ ನಾಡಿನ ಹೆಸರಾಂತ ಶಿಲ್ಪಿಗಳಾದ ಶ್ರೀ ನಾಗೇಂದ್ರ ಸ್ತಪತಿಗಳ ಬಗ್ಗೆ ಶ್ರೀ ಎಲ್. ಶಿವಲಿಂಗಪ್ಪ ಅವರು ಪುಸ್ತಕವನ್ನು ಬರೆದುಕೊಟ್ಟಿದ್ದಾರೆ. ಶ್ರೀಯುತರು ಅವರ ಶಿಷ್ಯರಾಗಿ, ಅವರ ಬಗ್ಗೆ ಚೆನ್ನಾಗಿ ಅರಿತಿದ್ದು, ಅವರ ಜೀವನ ಮತ್ತು ಕೃತಿಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಶ್ರೀಯುತರಿಗೆ ಅಕಾಡೆಮಿಯ ಪರವಾಗಿ ವಂದನೆಗಳನ್ನು ಸಲ್ಲಿಸುವೆ.

ನಮ್ಮ ನಾಡಿನ ಜನರು ಅಕಾಡೆಮಿಯ ಈ ಸಾಧನೆಯನ್ನು ಸ್ವಾಗತಿಸುವರೆಂದು ಆಶಿಸುತ್ತೇನೆ.

1999 ಡಿಸೆಂಬರ್ — ಸಿ. ಪರಮೇಶ್ವರಾಚಾರ್

ಬೆಂಗಳೂರು — ಅಧ್ಯಕ್ಷರು, ಕರ್ನಾಟಕ ಶಿಲ್ಪಕಲಾ ಅಕಾಡೆಮಿ.



ಸಾಥ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ

ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ

ಸ್ತಪತಿ ಎನ್ನುವ ಪದ ಕೇವಲ ನಾಮಾಂಕಿತವಾಗಿರಲಿಲ್ಲ. ಅದು ಅನ್ವರ್ಥ ನಾಮವೂ ಆಗಿತ್ತು. ಶಿಲ್ಪ ಶಾಸ್ತ್ರವು ಸ್ತಪತಿ ಎಂಬ ಪದಕ್ಕೆ ವಿಶೇಷ ಅರ್ಥ ನೀಡುತ್ತದೆ. (Chief Architect) ಜಗತ್‌ಸೃಷ್ಟಿ ಮೂಲವೆಂದು ಭಾವಿಸುವ ವಿಶ್ವಕರ್ಮನಿಂದ ಸ್ತಪತಿ, ಸೂತ್ರಗ್ರಾಹಿ, ವಾರ್ಧಣಿ, ತಕ್ಷಕ ಎಂಬ ಚತುರ ಶಿಲ್ಪಿಗಳಾದರೆಂದು ಅವರವರಿಗೆ ಒಂದೊಂದು ಜವಾಬ್ದಾರಿಯನ್ನು ಶಾಸ್ತ್ರಗ್ರಂಥ ಹೇಳುತ್ತದೆ. ಸೂತ್ರ ಗ್ರಾಹಿಕೆಗೆ ಅಳತೆಗಳ ವಿಚಾರ, ಶಿಲ್ಪಶಾಸ್ತ್ರದ ಪರಿಚಯ, ಚಿತ್ರರಚನೆ ಮುಖ್ಯವೆನಿಸಿದರೇ ವಾರ್ದಕಿಗೆ ಬಳಸುವ ವಸ್ತುಗಳ ಗುಣದೋಶಗಳನ್ನು ತಿಳಿದು ವೃದ್ಧಿಪಡಿಸುವುದಾಗಿರುತ್ತದೆ. ತಕ್ಷಕ ವಿಗ್ರಹಾದಿ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸಿದರೇ, ಸ್ತಪತಿ ಎಲ್ಲರಿಗೂ ಮೇಲ್ವಿಚಾರಕರಾಗಿ, ಸೂಕ್ತವಾದ ಸಮಂಜಸವಾದ, ವಾಸ್ತುಶಿಲ್ಪಗಳ ನಿರ್ಮಾಣದ ಸಮಗ್ರ ಹೊಣೆ ಹೊತ್ತವನಾಗಿರುತ್ತಾನೆ. ಅತ್ಯಂತ ಜವಾಬ್ದಾರಿಯುತ ಪರಿಪೂರ್ಣತೆಯುಳ್ಳ ವ್ಯಕ್ತಿತ್ವದ ಅವಶ್ಯಕತೆ ಸ್ತಪತಿಯಾದವರಿಗೆ ಅಗತ್ಯ. ಈ ಎಲ್ಲಾ ಗುಣಗಳನ್ನು ಅಳವಡಿಸಿಕೊಂಡವರೇ ನಾಗೇಂದ್ರ ಸ್ತಪತಿಗಳು.

ನಾಗೇಂದ್ರ ಸ್ತಪತಿಯುವರು ಬಹುದೊಡ್ಡ ಪರಂಪರೆಯಿಂದ ಬಂದವರು. ಇವರ ಪೂರ್ವಿಕರು ವಿಜಯನಗರದ ಶಿಲ್ಪಿಗಳಾಗಿದ್ದವರು. ಕಾಲಾನಂತರದಲ್ಲಿ ಮೈಸೂರು ಜಿಲ್ಲೆಯ ಕೊಳ್ಳೆಗಾಲಕ್ಕೆ ಬಂದು ನೆಲೆಸಿದವರಾಗಿದ್ದು, ಆ ಪರಂಪರೆಯಲ್ಲಿ ಒಂದು ಬಹುದೊಡ್ಡ ಖ್ಯಾತಿಯನ್ನು ಗಳಿಸಿದ ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರ ಏಕಮಾತ್ರ

ಪುತ್ರರಾದವರೇ ಸ್ತಪತಿಯವರು. ದಾರು, ಲೋಹ, ಶಿಲಾ ಕೆತ್ತನೆ, ಜ್ಯೋತಿಷ್ಯ, ಮಂತ್ರ, ತಂತ್ರ ವಿದ್ಯೆ, ಸಂಸ್ಕೃತ ಪಾಂಡಿತ್ಯ ಇವೆಲ್ಲದರ ಸಂಗಮವಾಗಿ, ಅಪರಿಮಿತವಾದ ಸಾದನಾಪುರುಷರಾಗಿ, ಯೋಗಿಗಳಾಗಿ ಮೈಸೂರು ರಾಜಮನೆತನದವರ ಗುರುವಾದವರು. ಅರಮನೆಯ ಶ್ರೇಯಸ್ಸಿಗೆ, ಕಲಾಸಂವರ್ದನೆಗೆ ಅಹಿರ್ನಿಷಿ ದುಡಿದ ಸ್ವಾಮಿಗಳವರ ವ್ಯಕ್ತಿತ್ವ ಮೇರು ಸದೃಷವಾದದ್ದು.

ನಾಗೇಂದ್ರ ಸ್ತಪತಿಯವರು ಅವರ ತಂದೆ, ತಾತರಂತೆ ಕಾವಿ ಹಾಕಿದವರಲ್ಲ, ಋಷಿಮುನಿಗಳಂತೆ ಜಟಾದಾರಿಗಳಾಗಿರಲಿಲ್ಲ. ಶ್ವೇತ ವಸ್ತ್ರದಾರಿಗಳು, ಸದಾಕಾಲ ಕಚ್ಚೆ ಪಂಚೆ, ಮೈಮೇಲೆ ಅಂತಹದೇ ಪಂಚೆಯ ಹೊದಿಕೆ, ಹಿಂದಕ್ಕೆ ಬಾಚಿದತಲೆ, ಹಣೆಯಲ್ಲಿ ತ್ರಿ ಪುಂಡ್ರ ಬಸ್ಮದಾರಿಣಿ, ಕೈಯಲ್ಲಿ ಕೊಂಚ ಹೂವನ್ನು, ಊದುಬತ್ತಿಯನ್ನು, ಹಿಡಿದು ಗುರುಕುಲಕ್ಕೆ ಬರುತ್ತಿದ್ದ ರೀತಿ ಸ್ಮರಣೀಯವಾದದ್ದು. ತಮ್ಮ ಕಾರ್ಯಾಲಯ ಪ್ರವೇಶಿಸುತ್ತಿದ್ದಂತೆಯೇ ಪ್ರಥಮವಾಗಿ ಇವರ ಆದಿ ಗುರುಗಳಾದ ಕರಸ್ಥಲದ ನಾಗಲಿಂಗ ಸ್ವಾಮಿಗಳವರ ಹಾಗೂ ನಂಜುಂಡ ಶಿವಯೋಗಿಗಳವರ ಚಕ್ರ ಪಠಗಳಿಗೆ ನಮಿಸಿ, ತಮ್ಮ ತಂದೆಯವರನ್ನು ನೆನೆದು ನಂತರವೇ, ತಮ್ಮ ನಿತ್ಯಕಾರ್ಯದ ಆರಂಭ. ಹೊರಗೆ ಕಾಯುತ್ತಿದ್ದ ಜನರಿಗೆ ಒಳ ಬರಲು ಅವಕಾಶ.

ಕಾರ್ಯಾಲಯ

ಸ್ತಪತಿಯವರ ಕಾರ್ಯಾಲಯ ಅನ್ನುವುದಕ್ಕಿಂತ ಕಿರು ಕಛೇರಿ ಅನ್ನಬಹುದು. ಬಂದವರೆಲ್ಲರೂ ನೆಲಹಾಸಿನ ಮೇಲೆ ಕೂರಬೇಕು. ಸ್ತಪತಿಯವರಿಗೆ ತುಸು ಎತ್ತರವಾದ ನೆಲೆಹಾಸು, ಹಿಂದೆ ಒರಗುದಿಂಬು, ಮುಂದೊಂದು ಇಳಿಜಾರು ಮೇಜು, ಎಡ ಬಲಗಳಲ್ಲಿ ಕಿರಿದಾದ ಕೈಗೆ ಎಟಕುವ ಕಡತಗಳ ಪುಟ್ಟ ಪುಟ್ಟ ಮೇಜು.

ಸ್ತಪತಿಗಳ ಕೋಣೆಯ ತುಂಬಾ ಪೂರ್ಣಗೊಂಡ, ಪೂರ್ಣವಾಗದ ಚಿತ್ರಗಳು. ಒಂದೆಡೆ ತೈಲವರ್ಣದ ಅವರ ಗುರುಗಳ ಚಿತ್ರ. ತಂದೆಯವರ ಚಿತ ಮತ್ತೊಂದೆಡೆಯಲ್ಲಿ ವಿದಾನ ಸೌಧದ ವಾಸ್ತುವಿನ್ಯಾಸದ ಹಲವಾರು ಕೃತಿಗಳು, ವಿವಿಧ ದಿಕ್ಕುಗಳಲ್ಲಿ ಕಾಣುವ ಸೌಧದ ಬಾಹ್ಯನೋಟ. ಪೆನ್ಸಿಲ್ ಹಾಗೂ ಜಲವರ್ಣದಲ್ಲಿ ರಚಿಸಿದಂತಹವು. ಹಾಗೆಯೇ ಶಿಲ್ಪ ಶಾಸ್ತ್ರಕ್ಕೆ ಅಗತ್ಯವಾದ ತಾಳಮಾನವನ್ನು ತಿಳಿಸುವ ವಿವರ ಸಹಿತವಾದ ರೇಖಾ ಚಿತ್ರಗಳು ಜನರನ್ನು ಹೆಚ್ಚಾಗಿ ಆಕರ್ಶಿಸುತ್ತಿದ್ದವು. ಬರುವ ಗ್ರಾಹಕರಿಗಾಗಿ ವೀಕ್ಷಿಸಲು ವಿವಿಧ ಬಗೆಯ ಚಿತ್ರಗಳನ್ನುಳ್ಳ ಬೃಹತ್ ಆಲ್ಬಂ ಇರುತ್ತಿತ್ತು. ಈಗಿನ ಹಾಗೆ ವರ್ಣಮಯ ಛಾಯಾಚಿತ್ರಗಳು ಹೆಚ್ಚಿನ ಬಳಕೆಯಲ್ಲಿರಲಿಲ್ಲ. ಬಹು ಹೆಚ್ಚಿನ ಪ್ರಮಾಣದಲ್ಲಿ ಪೆನ್ಸಿಲ್ ಹಾಗೂ ಇಂಕ್‌ನಿಂದ ರಚಿಸಿದ ಚಿತ್ರಗಳು. ಕೆಲವಕ್ಕೆ ಜಲವರ್ಣದ ಪಾರದರ್ಶಕ ಲೇಪ. ಪೂರ್ಣಗೊಂಡು ಪ್ರತಿಷ್ಠಾಪನೆಗೆ ಮುನ್ನ ತೆಗೆದ ಕಪ್ಪು ಬಿಳುಪಿನ ಛಾಯಾಚಿತ್ರಗಳು. ಒಂದೊಂದು ದೇವತಾ ಮೂರ್ತಿಯ ಲಾಕ್ಷಣಿಕ ಗುಣಗ್ರಾಹಿತ್ವವನ್ನು ತೋರುವ ನೂರಾರು ಚಿತ್ರಗಳನ್ನು ಗ್ರಾಹಕರು ನೋಡುತ್ತಿದ್ದಂತೆಯೇ ಯಾವುದು ಮಾಡಿಸಬೇಕು, ಯಾವುದು ಬಿಡಬೇಕು ಎಂಬ ಮಾನಸಿಕ ತುಮುಲಕ್ಕೊಳಗಾಗಿ ಕೊನೆಗೆ ಸ್ತಪತಿಯವರನ್ನೇ ಕುರಿತು, ನಮ್ಮ ಉದ್ದೇಶ ಹೀಗಿದೆ, ಏನು ಮಾಡಬೇಕು, ಯಾವ ವಿಗ್ರಹ ಸರಿ ನೀವೇ ತಿಳಿಸಿ ಎಂದು ಶ್ರೀಯುತರನ್ನೇ ಪ್ರಶ್ನಿಸಿ ಅವರ ಸಲಹೆ ಮೇರೆಗೆ ವಿಗ್ರಹ ಮಾಡಲು ಕೋರಿಕೆ ಸಲ್ಲಿಸಿ ಹೋಗುತ್ತಿದ್ದುದನ್ನು ನಾನು ಅವರ ಶಿಷ್ಯನಾಗಿ ಬಹಳ ಸಮೀಪದಿಂದ ನೋಡಿದ್ದೇನೆ.

ಗ್ರಾಹಕ

ವಿಗ್ರಹಕ್ಕಾಗಿ ಬಂದವರನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದರು. ಅವರ ಸದಾಕಾಲದ ಮುಗುಳ್ನಗು, ತುಂಬುಗಲ್ಲ, ಸಾತ್ವಿಕ ತೇಜಸ್ಸು, ಸಂಸ್ಕೃತಿಯೇ ಮೈವೆತ್ತಿ ನಿಂತಂತ ಅವರ ಬಾಹ್ಯ ವರ್ಚಸ್ಸು,

ಹಾಗೆಯೇ ಮೃದು ಮಧುರವಾಣಿ ಎಂತವರನ್ನು ಆಕರ್ಶಿಸುತ್ತಿತ್ತು. ಬಂದ ಗ್ರಾಹಕರು ಎಂದೂ ವಾಪಸ್ಸು ಹೋಗುತ್ತಿರಲಿಲ್ಲ. ನಮಗೆ ಇಲ್ಲಿಂದ ಶಿಲ್ಪ ರಚನೆ ಮಾಡಿಸಿ ಪ್ರತಿಷ್ಠಾಪಿಸಿದರೇ ನೆಮ್ಮದಿ ನಮ್ಮ ಊರಿಗೆ ಶ್ರೇಯಸ್ಸು ಎಂಬ ಧನ್ಯತಾ ಮನೋಭಾವದಿಂದ ನಿರ್ಗಮಿಸುತ್ತಿದ್ದರು. ಸಂದರ್ಭೋಚಿತವಾದ ಸಂಸ್ಕೃತ ಶ್ಲೋಕಗಳ ಹೇಳಿ, ಯಾವ ಯಾವ ಮೂರ್ತಿಗೆ ಏನೇನು ಪ್ರಮಾಣ ಅಂಗಸೌಷ್ಟವ ವಿರಬೇಕು. ಸ್ಥಾಪಿಸುವ ವಿದಿ ವಿಧಾನಗಳನ್ನು ಸವಿವರವಾಗಿ ತಿಳಿಸುತ್ತಿದ್ದರು. ಗ್ರಾಹಕರು ಹಣ ಕೊಡುತ್ತಾರೆ, ನಾವು ಯಾವುದೋ ಒಂದು ಮಾಡಿಕೊಟ್ಟರಾಯಿತು ಎಂಬ ಮನೋಭಾವ ಅವರಲ್ಲಿ ಕಿಂಚಿತ್ತೂ ಇರಲಿಲ್ಲ. ಗ್ರಾಹಕರು ಬಯಸಿದ ಶಿಲ್ಪಗಳ ವಿವರವನ್ನು ನೀಡಿ ಸಕಲಾಜನಬಿಷ್ಟವಾದ ದೇವತಾ ಮೂರ್ತಿಯ ಪ್ರತಿಷ್ಠಾಪನೆಗೆ ಸಕಾಲದಲ್ಲಿ ಮಾಡಿ ಸಹಕಾರ ನೀಡುತ್ತಿದ್ದರು. ಇದು ಸ್ತಪತಿಯವರ ಹಾಗೂ ಗ್ರಾಹಕರ ಅತ್ಯುನ್ನತಾ ಆತ್ಮೀಯ ಅಂತಃಕರಣದ ವಿಚಾರ.



ಪ್ರದರ್ಶನಾಲಯ

ಪ್ರದರ್ಶನಾಲಯ ಪ್ರತಿಷ್ಠಾಪನೆಗೆಂದು ಸಿದ್ಧವಾಗಿದ್ದ ಶಿಲಾವಿಗ್ರಹಗಳನ್ನು ಇಡುತ್ತಿದ್ದ ಪ್ರದರ್ಶನ ಕೋಣೆಗೆ (Gallery) ಸ್ಥಪತಿಯವರು ಕರೆದೊಯ್ಯುತ್ತಿದ್ದರು. ಶೈವಶಿಲ್ಪಿ ಬ್ರಹ್ಮಶ್ರೀ ಗುರುಕುಲ ಎಂಬ ನಾಮಾಂಕಿತವಿದ್ದರೂ ವಾಡಿಕೆಯಲ್ಲಿ ಗುರುಕುಲ ಎಂದೇ ಕರೆಯುತ್ತಿದ್ದರು. ಗುರುಕುಲದ ನಾಲ್ಕಾರು ಪಾವಟಿಗೆಗಳನ್ನು ಹತ್ತುತ್ತಿದ್ದಂತೆಯೇ ಬಲಗಳಲ್ಲಿ ಪ್ರದರ್ಶನಾಂಗಣವಿತ್ತು. ಅಲ್ಲಿ ಶಿಲ್ಪ ಶಾಸ್ತ್ರಕ್ಕೆ ಮೂಲಾಧಾರರಾದ ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞ ಬ್ರಹ್ಮರುಗಳ ವಿಗ್ರಹಗಳು ಇದ್ದವು. ಅದರಲ್ಲಿ ಕೆಲವನ್ನು ಸಿಮೆಂಟಿನಲ್ಲಿ ಮಾಡಿದ್ದರೇ, ಕೆಲವನ್ನು ಶಿಲೆಯಲ್ಲಿ ಮಾಡಿದ್ದರು. ಅವುಗಳಿಗೆ ಸಹಜವಾದ ವರ್ಣಲೇಪನ ಮಾಡಿದ್ದರು. ಅಲ್ಲಿಂದ ಒಳಭಾಗಗಳಲ್ಲಿ ಎಡ ಬಲಕ್ಕೆ ಹೊಂದಿಕೊಂಡಂತೆ ಮರದ ಜಗತಿಯಲ್ಲಿ ಅಲಂಕಾರಯುಕ್ತವಾದ ಸಣ್ಣ ಪುಟ್ಟ ವಿಗ್ರಹಗಳು, ಕೆಳಗೆ ದೊಡ್ಡ ಪ್ರಮಾಣದ ವಿಗ್ರಹಗಳು, ಹಾಗೆಯೇ ಗೋಡೆಗೆ ತಗಲಿಹಾಕಿದ್ದ ಚಿತ್ರಗಳ ಸಾಲು ಸಾಲು ಮಹಾರಾಜರವರ ಚಿತ್ರ, ಸರಸ್ವತಿಯ ಚಿತ್ರ ದಕ್ಷಿಣಾಮೂರ್ತಿ, ಏಕಮುಖ, ತ್ರಿಮುಖ ಈಶ್ವರನ ಚಿತ್ರ, ಹಲವಾರು ರೇಖಾಚಿತ್ರಗಳು, ಮುಖ್ಯವಾಗಿ ಇವರ ಮೂಲಗುರುಗಳಾದ ಕರಸ್ಥಲದ ನಾಗಲಿಂಗಸ್ವಾಮಿಗಳವರ ಜೀವನ ವೃತ್ತಾಂತ ಕುರಿತ ಜಲವರ್ಣದ ಚಿತ್ರಗಳು ಹೀಗೆ ಹಲವಾರು ಚಿತ್ರಗಳನ್ನು ನೋಡುವ ಸುಯೋಗ ಬಂದ ಗ್ರಾಹಕನಿಗೆ.

ನೂರೊಂದು ಲಿಂಗ

ಕಣ್ಮನಗಳಲ್ಲಿ ಚಿತ್ರವನ್ನು ತುಂಬಿಕೊಂಡು ಗ್ರಾಹಕ ಒಳಹೊಕ್ಕರೇ ಅಲ್ಲಿ ನೂರಾ ಒಂದು ಶಿವಲಿಂಗಗಳನ್ನು ವೃತ್ತಾಕಾರವಾಗಿ ಜೋಡಿಸಿರುವ, ಅವುಗಳ ಮೇಲೆ ಚತುರ್ ದಿಕ್ಕುಗಳಿಗೂ ಮುಖಮಾಡಿದಂತೆ ಸ್ಥಾಪಿಸಿರುವ,

ವಾಮ, ಅಘೋರ, ತತ್ಪೂರಷ, ಈಶಾನ ಎಂಬ ನಾಲ್ಕು ವಿಗ್ರಹಗಳಿದ್ದು, ಅದರ ಮಧ್ಯಭಾಗದಿಂದ ಕೃತಕವಾಗಿ ನೀರು ಬೀಳುವಂತಹ ಕೃತಕ ವ್ಯವಸ್ಥೆಯು ಸೇರಿದಂತೆ ಶಿವಲಿಂಗಗಳ ದರ್ಶನವಾಗುತ್ತಿತ್ತು. ವೃತ್ತಾಕಾರವಾಗಿರುವ ಆ ಪರಿದಿಯ ನಾಲ್ಕು ದಿಕ್ಕುಗಳಿಗೂ ಒಂದೊಂದು ನಂದಿ ಮೂರ್ತಿಯನ್ನು ಸ್ಥಾಪಿಸಿರುವ ದೃಶ್ಯ ಬಂದವರೆಲ್ಲರನ್ನು, ಕರಮುಗಿದು, ಶಿರಬಾಗಿ ನಮಿಸುವಂತೆ ಮನಸ್ಸನ್ನು ಪ್ರೇರೆಪಿಸುವಂತಿರುತ್ತಿತ್ತು.

ಗುರುಕುಲ ಲಕ್ಷಣ

ಶಿವಲಿಂಗಗಳನ್ನು ದರ್ಶಿಸಿ ಸುತ್ತಲೂ ಕಣ್ಣಾಡಿಸಿದರೇ ಚಚ್ಚೌಕವಾಗಿರುವ ಒಳ ಆವರಣದಲ್ಲಿರುವ ಎಲ್ಲಾ ದ್ವಾರಗಳ ಮೇಲ್ಭಾಗದಲ್ಲಿ ಸಂಸ್ಕೃತ ಶ್ಲೋಕಗಳು, ನೂರಾರು ವಿದ್ಯಾರ್ಥಿಗಳು, ಗುರುಕುಲದಲ್ಲಿ ಕಲಾಭ್ಯಾಸ, ಶಿಲ್ಪಭ್ಯಾಸ ಮಾಡುವವರು ಅಲ್ಲದೇ ವಿವಿದ ಶಾಲಾ ಕಾಲೇಜುಗಳಿಗೆ ಹೋಗುವ ವಿದ್ಯಾರ್ಥಿ ಸಮೂಹ. ಅವರೆಲ್ಲರಿಗೂ ನಾಗೇಂದ್ರ ಸ್ತಪತಿಯವರೇ ಮಾರ್ಗದರ್ಶಕರು. ಬೆಳಿಗ್ಗೆ ಸಂಜೆ ಅಲ್ಲಿನ ವಿದ್ಯಾರ್ಥಿ ಸಮೂಹ ಒಂದೆಡೆ ಕಲೆತು ಧ್ಯಾನಾಶಕ್ತರಾಗಬೇಕು. ಗುರುವಂದನೆ ಸಲ್ಲಿಸಬೇಕು. ಹಾಗೆಯೇ ಸತತವಾಗಿ ಕಲಾಭ್ಯಾಸ ಮಾಡಬೇಕೆಂಬುದು ಸ್ತಪತಿಯವರ ನಿಲುವಾಗಿತ್ತು. ಗುರುಕುಲ ಪದ್ಧತಿಗೆ ಅನುಗುಣವಾದ ಶಿಕ್ಷಣವಾದ್ದರಿಂದ ಯಾವ ವಿದ್ಯಾರ್ಥಿಗಳು ಶಾಸ್ತ್ರಾದಾರ ರಹಿತವಾಗಿ ಮುನ್ನೆಡೆಯುವಂತಿರಲಿಲ್ಲ. ಕಾಲ ನಿಯಮ, ಕಲಾನಿಯಮಗಳ ಕಟ್ಟುನಿಟ್ಟಿನ ಪಾಲನೆ ಅಗತ್ಯ. ದೇಶಿಯ ಶಿಕ್ಷಣಕ್ಕೆ ಹೊಂದಿಕೊಂಡಿರಬೇಕಾದ ಶಿಷ್ಯವರ್ಗ. ಪಾಶ್ಚಾತ್ಯ ಶೈಲಿಯಿಂದ ಬಹುದೂರವೇ ಇರಬೇಕೆಂಬ ನಿಯಮವೇನೂ ಇರಲಿಲ್ಲ. ಆದರೆ ದೇಶಿಯ ಶೈಲಿಗೆ ಪ್ರಥಮ ಪ್ರಾಶಸ್ತ್ಯ. ಚಿತ್ರಕಲೆಯ ಮೂಲಭೂತ ಅಂಶಗಳನ್ನು ಶಿಲ್ಪಿಯಾಗಬಯಸುವವನು ತಿಳಿದಿರಲೇ ಬೇಕು ಎಂಬುದು ಅವರ ಅಭಿಮತ. ಯಾವುದೇ ಮೂರ್ತಿ ಶಿಲ್ಪ ಮಾಡಲು

ಆರಂಭಿಸುವ ಮುನ್ನ ಆಯಾಯ ದೇವತೆಗಳ ಧ್ಯಾನಶ್ಲೋಕಗಳಿಗನುಗುಣವಾಗಿ ಸೀಸದಕಡ್ಡಿಯಿಂದ ಚಿತ್ರ ರಚಿಸಿಕೊಳ್ಳಬೇಕು. ಆ ಚಿತ್ರದ ಆಧಾರದ ಮೇಲೆ ಆಯ್ದುಕೊಂಡ ಕಲ್ಲು, ಉದ್ದ, ಅಗಲ, ದಪ್ಪಗಳಿಗೆ ಸರಿಹೊಂದುವಂತೆ ಇದ್ದಲ ಮಸೆಯಿಂದ ಚಿತ್ರ ರಚಸಿ, ಬೇಡದ ಭಾಗವನ್ನು (ಪರಸ್ಥಲ)ತೆಗೆಯಬೇಕು. ಪ್ರತಿಹಂತದಲ್ಲಿಯೂ ಸ್ತಪತಿಯವರು ವಿದ್ಯಾರ್ಥಿ ಸಮೂಹಕ್ಕೆ ಮಾರ್ಗದರ್ಶಕರಾಗಿರುತ್ತಿದ್ದರು. ಆಗ್ಗೆ ಅದು ಕಠಿಣವೆನಿಸಿ ಬೇಸರವೆನಿಸಿದರೂ ಇಂದು ಅದರ ಮಹತ್ವದ ಅರಿವುಂಟಾಗುತ್ತದೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ಇಂದು ನಾಡಿನ ಸುಪ್ರಸಿದ್ಧ ಕಲಾವಿದರಾಗಿದ್ದಾರೆ, ಶಿಲ್ಪಿಗಳಾಗಿದ್ದಾರೆ, ರಾಜ್ಯಕ್ಕೆ ರಾಷ್ಟ್ರಕ್ಕೆ ಗೌರವ ತಂದಿದ್ದಾರೆ.

ಸ್ತಪತಿಯವರು ಬಂದಂತಹ ಗ್ರಾಹಕರನ್ನು ಬೀಳ್ಕೊಟ್ಟು, ವಿದ್ಯಾರ್ಥಿಗಳ ಅಭ್ಯಾಸಕ್ರಮವನ್ನು ಅವಲೋಕಿಸಿ ಕೆತ್ತನೆಯ ಕರ್ಮಭೂಮಿ ಯೆಡೆಗೆ ಆಗಮಿಸುತ್ತಿದ್ದಂತೆಯೇ ವಿದ್ಯುತ್ ಸಂಚಾರವಾದಂತಾಗಿ ಅಲ್ಲಿನ ಸಹಾಯಕ ಶಿಲ್ಪಿಗಳ ಕಾರ್ಯ ದ್ವಿಗುಣಗೊಳ್ಳುತ್ತಿತ್ತು. ಆಯಾಯ ವಿಗ್ರಹಗಳ ಲಕ್ಷಣಗಳನ್ನು ಕುರಿತು ಆಗಬೇಕಾದ ಕೆಲಸದ ಬಗ್ಗೆ ಪ್ರತಿಯೊಬ್ಬರಲ್ಲೂ ಚರ್ಚಿಸಿ ಸಲಹೆ ನೀಡುವುದರ ಜೊತೆಗೆ ತಾವೇ ಸ್ವತಃ ಕುಳಿತು ಕೆಲಸ ಮಾಡುತ್ತಿದ್ದರು. ವಿಗ್ರಹಗಳಿಗೆ ಅಂತಿಮ ರೂಪು ಕೊಡುವತ್ತ ಗಮನ ಹರಿಸುತ್ತಿದ್ದರು.

ಸ್ವಯಂ ಶಿಸ್ತು

ಸಕಾಲಕ್ಕೆ ವಿಗ್ರಹ ಕೊಡಲೇಬೇಕೆಂದು ತಮ್ಮನ್ನು ತಾವೇ ಸ್ವಯಂ ಶಿಸ್ತಿಗೆ ಅಳವಡಿಸಿಕೊಂಡಿದ್ದ ಸ್ತಪತಿಯವರು ಹಗಲುರಾತ್ರಿಯ ಪರಿವಿಲ್ಲದೆ ಕೆತ್ತನೆಯಲ್ಲಿ ತೊಡಗುತ್ತಿದ್ದರು. ನಿಗದಿತ ಸಮಯಕ್ಕೆ ಕೆಲಸವಾಗದೇ ಪ್ರತಿಸ್ಠಾಪನೆ ಹತ್ತಿರ ಬಂದ ಸಂದರ್ಭದಲ್ಲಿ ಆಸಕ್ತಿಯುಳ್ಳ ಕೆಲವು ವಿದ್ಯಾರ್ಥಿಗಳನ್ನು ಕರೆದು ಇದೇ ನೀವು ಕೆಲಸ ಕಲಿಯಲಿಕ್ಕೆ ಸರಿಯಾದ

ಸಮಯ, ಆಲಸ್ಯವನ್ನು ತೊರೆದು ನಮ್ಮೊಡನೆ ಬನ್ನಿ ಎಂದು ವಿದ್ಯುತ್‌ದೀಪದ ಬೆಳಕಿನಲ್ಲಿ ರಾತ್ರಿಯೆಲ್ಲಾ ಕೆಲಸ ಮಾಡಿಸುತ್ತಿದ್ದರು. ತಾವು ಮಾಡುತ್ತಿದ್ದರು. ಅವರ ಶಿಷ್ಯರಾದ ನಮಗೊ ನಿದ್ದೆಯ ಮಂಪು, ಒಂದೆಡೆ ಆಲಸ್ಯ, ಮತ್ತೊಂದೆಡೆ ಕೆತ್ತನೆಯ ಒಳಮರ್ಮ ತಿಳಿಯುವುದಲ್ಲ ಎಂಬ ಸಂತಸ. ಸ್ತಪತಿಯವರು ಶಿಷ್ಯರ ಒಳಬೇಗುದಿಯನ್ನು ಅರ್ಥಮಾಡಿಕೊಂಡು ಅವರಿಗೆ ಆಯಾಸವಾಗದಂತೆ ಮನೆಯಿಂದ ಆಗಾಗ್ಗೆ ತಿಂಡಿ ತಿನಸು, ಚಹಾ ತರಿಸಿ ಕೊಡುತ್ತಿದ್ದರು. ತಮ್ಮ ಕಲಾನುಭವದ ನೆನಪುಗಳನ್ನು ಶಿಷ್ಯರೊಡನೆ ಹಂಚಿಕೊಳ್ಳುತ್ತಿದ್ದರು. ಆ ದಿನಗಳು ನಮಗೆ ಅವಿಸ್ಮರಣೀಯ. ಸ್ತಪತಿಯವರಾದರೋ ಮೂರ್ತಿಯ ಮೂರ್ತಿತ್ವವನ್ನು ಮನದಲ್ಲಿ ಮೂಡಿಸಿಕೊಂಡು ವಿಗ್ರಹದ ಮೇಲೆ ಕುಳಿತು ಕಿರಿದಾದ ಉಳಿಗಳಿಂದ ಮುಖವರ್ಣಿಕೆಯನ್ನು ಕೆತ್ತುವ ಸಂದರ್ಭದಲ್ಲಿಯಂತೂ ಧ್ಯಾನಾಶಕ್ತರಾಗಿರುತ್ತಿದ್ದರು. ಶಿಲ್ಪಿ, ಶಿಲ್ಪಗಳ ಭಾವೋನ್ಮಿಲನವಾಗಿ ಶಾಸ್ತ್ರಾದಾರ ಸಹಿತವಾದ ಶಿಲ್ಪ ಹೊರಹೊಮ್ಮುತ್ತಿತ್ತು. ಮುಂಜಾನೆ ಐದು ಗಂಟೆವರೆಗೆ ನಿರಂತರ ಕೆಲಸ ಮಾಡಿದ ಸ್ತಪತಿಯವರು ಪುನಃ ಸ್ನಾನ ಪೂಜಾದಿಗಳನ್ನು ಪೂರೈಸಿ ದೈನಂದಿನ ಕಾರ್ಯದಲ್ಲಿ ಮಗ್ನರಾಗುತ್ತಿದ್ದುದನ್ನು ಕಂಡರೆ ನಮಗೆ ವಿಸ್ಮಯ, ಅವರ ಕಾರ್ಯಶಕ್ತಿಗೆ ಮನದಲ್ಲೆ ವಂದನೆ ಸಲ್ಲಿಸುವಂತಾಗುತ್ತಿತು.

ಜನನ ಮತ್ತು ಬಾಲ್ಯ

ಸ್ತಪತಿಯವರ ಹೆಸರಿನ ಹಿಂದೆ ನಾಗೇಂದ್ರ ಎಂಬ ಪದ ಸೇರಲು ಪ್ರಬಲ ಕಾರಣವೊಂದಿದೆ. ಸಿದ್ದಲಿಂಗ ಸ್ವಾಮಿಗಳವರ ಏಕಮಾತ್ರ ಪುತ್ರರಾದ ಇವರ (ಜನನ 28-2-1013 ಮೈಸೂರು) ನಾಮಕರಣವಾಗುವ ಮುನ್ನವೇ ಶಿಶುವಾಗಿದ್ದಾಗ ತೊಟ್ಟಿಲಲ್ಲಿ ಹೆಡೆಯಾಡುತ್ತಿದ್ದ ಹಾವೊಂದು ಕಾಣಿಸಿಕೊಳ್ಳಲಾಗಿ, ನಾಗೇಂದ್ರ ಸ್ತಪತಿ ಎಂಬ ಶಿರೋನಾಮ

ಇಡಲಾಯಿತೆನ್ನುತ್ತಾರೆ. ಇವರ ಸಮಕಾಲೀನರು ನಾಗರಾಜಪ್ಪ ಎಂದೇ ಕರೆಯುತ್ತಿದ್ದರು.

ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬ ನಾಣ್ನುಡಿಯೊಂದಿದೆ. ಸ್ತಪತಿಯವರಿಗೆ ತಾಯಿಗಿಂತ ತಂದೆಯೇ ಗುರುವಾಗಿ, ಮಠವೇ ಪಾಠಶಾಲೆಯಾಗಿತ್ತು. ಜಗದ್ಗುರು ಶ್ರೀ ನಾಗಲಿಂಗಸ್ವಾಮಿಗಳವರ ಮಠ ಮತ್ತು ಗುರುಕುಲದ ಪ್ರತಿಯೊಂದು ಅಂಗುಲವೂ ಕಲಾ ಸಂಸ್ಕೃತಿಯಿಂದ ಮೈದುಂಬಿ ನಿಂತಿತ್ತು. ಆಗಿನ್ನೂ ವ್ಯವಸ್ಥಿತ ಕಟ್ಟಡದ ಗುರುಕುಲ ಆರಂಭವಾಗಿರಲಿಲ್ಲವಾದರೂ ಗುರುಕುಲ ಎಂಬ ಅಭಿದಾನದಿಂದಲೇ ಗುರುತಿಸಲ್ಪಡುತ್ತಿತ್ತು. ಅದಕ್ಕೆ ಪ್ರಬಲ ಕಾರಣ ಗುರುವಿನ ಸತ್ಕ್ರಿಯಾಚರಣೆ, ಕಟ್ಟುನಿಟ್ಟಿನ ಶಾಸ್ತ್ರಾಭ್ಯಾಸ, ಸಂಸ್ಕೃತಾಧ್ಯಯನ. ಶ್ರೀ ಮಠದಲ್ಲಿ ಭಜನೆ, ಗುರುಧ್ಯಾನ ಇವುಗಳು ನಿರಂತರವಾಗಿ ನಡೆಯಲೇಬೇಕಾದ ನಿತ್ಯಕರ್ಮಗಳಾಗಿದ್ದವು. ಕಲ್ಗೆತ್ತನೆ, ಲೋಹಗಳಲ್ಲಿ ಉಬ್ಬುಗೆತ್ತನೆ, ಚಿತ್ರರಚನೆಗಳಲ್ಲಿ ನಿರತರಾದ ಶಿಷ್ಯವರ್ಗ, ಸಕಲ ಶಾಸ್ತ್ರ ಪಂಡಿತರಾಗಿದ್ದ ಸಿದ್ಧಲಿಂಗ ಸ್ವಾಮಿಗಳವರನ್ನು ದರ್ಶಿಸುವುದೇ ಪುಣ್ಯ ಪಲವೆಂಬಂತೆ ವಿವಿಧೆಡೆಗಳಿಂದ ಬರುತ್ತಿದ್ದ ಜನಸಮೂಹ, ಹಾಗೆಯೇ ಚಿತ್ರ, ಶಿಲ್ಪ, ಸಾಹಿತ್ಯಾದಿಗಳಿಗೆ ಸಂಬಂಧಿಸಿದ ಆಶಕ್ತರು, ವಿದ್ವನ್ಮಣಿಗಳು ಕಲಾಕೋವಿದರು ದೇಶ ವಿದೇಶಗಳಿಂದ ಆಗಮಿಸುತ್ತಿದ್ದುದು ಇವೆಲ್ಲವೂ ಬಾಲಕ ಸ್ತಪತಿಯವರಲ್ಲಿ ಗಾಡ ಪ್ರಭಾವ ಬೀರಿದವು.

ಸಂಗೀತ ಪ್ರೇಮಿ

ಸ್ತಪತಿಯವರು ಶ್ರೀ ಮಠದಿಂದ ಚಿತ್ರ, ಶಿಲ್ಪ, ಜ್ಯೋತಿಷ್ಯಶಾಸ್ತ್ರದ ಅಭ್ಯಾಸ ಮಾಡುವುದರ ಜೊತೆಗೆ ಆಂಗ್ಲಭಾಷೆ, ಸಂಸ್ಕೃತ, ಹಿಂದಿ, ತಮಿಳು, ತೆಲುಗು ಸಹ ಕಲಿತಿದ್ದರು, ವ್ಯವಹರಿಸುತ್ತಿದ್ದರು. ಸಂಗೀತವನ್ನು ಆಸಕ್ತಿಯಿಂದ ಅಭ್ಯಸಿಸಿ ಮೃದಂಗ ನುಡಿಸುವುದರಲ್ಲಿ ಸಹ ನೈಪುಣ್ಯತೆ ಪಡೆದಿದ್ದರು. ಅಂದಿನ



ಆಸ್ಥಾನ ವಿದ್ವಾಂಸರಾಗಿದ್ದ ವಾಸುದೇವಾಚಾರ್ಯರ ಸಂಗೀತ ಕಛೇರಿಗಳಲ್ಲಿ ಸಹ ಮೃದಂಗ ವಾದಕರಾಗಿ ವಿದ್ವಾನ್ ಎಂಬ ಖ್ಯಾತಿಗೆ ಭಾಜಕರಾಗಿದ್ದರೆಂಬುದು ತಿಳಿದುಬರುತ್ತದೆ. ಪ್ರತಿ ಸೋಮವಾರ ನಾಗಲಿಂಗ ಸ್ವಾಮಿಯವರ ಮಠದಲ್ಲಿ ನಡೆಯುತ್ತಿದ ಸಂಗೀತ ಕಾರ್ಯಕ್ರಮದಲ್ಲಿ ವಾದಕರಾಗಿದ್ದುದ್ದಲ್ಲದೇ ಸ್ವತಃ ತಾವೇ ಹಾಡುತ್ತಿದ್ದರು. ತತ್ವ ಪದಗಳಲ್ಲಿ ಅಪಾರ ಆಸಕ್ತಿ ಇದ್ದು ಹಾಡುತ್ತ ಹಾಡುತ್ತ ಮನದುಂಬಿ, ಮೈದುಂಬಿ ಭಕ್ತಿಪರವಶರಾಗುತ್ತಿದ್ದ ಸನ್ನಿವೇಶವನ್ನು ಅವರ ಶ್ರೀಮತಿಯವರು ಈಗಲೂ ನೆನಸಿಕೊಳ್ಳುತ್ತಾರೆ.



ಲಕ್ಷ್ಮಿ



ಸರಸ್ವತಿ



ಪಾರ್ವತಿ



ಶಿವ



ದಕ್ಷಿಣಾಮೂರ್ತಿ ಯುವಕ ವಯೋವೃದ್ಧರು ಶಿಷ್ಯರು

ಶಾಲೆಯ ಓದಿಗಿಂತ ಕಲೆಯೇ ಮುಖ್ಯವಾಗಿತ್ತು. ಅಂದಿನ ಶ್ರೀ ಚಾಮರಾಜೇಂದ್ರ ವೃತ್ತಿಕಲಾ ಶಾಲೆ, ಅಲ್ಲಿನ ಐದುವರ್ಷದ ಶಿಕ್ಷಣ ಪೂರೈಸಿ ಅಕಾಡೆಮಿಕ್ ಶೈಲಿಯ ಅಲ್ಲಿನ ಕಲಾ ಶಿಕ್ಷಣದ ಜೊತೆ ಜೊತೆಗೆ ಶ್ರೀ ಮಠದಲ್ಲಿ ಸಕ್ರೀಯವಾಗಿ ಕಾರ್ಯೋನ್ಮುಖವಾಗುತ್ತಿದ್ದುದು, ಪ್ರತಿಭಾ ವಿಕಸನಕ್ಕೆ ಸಹಕಾರಿಯಾಗುತ್ತಿತ್ತು. ಮುಖ್ಯವಾಗಿ ಸ್ತಪತಿಯವರು ಸ್ವಾಮಿಗಳೊಡನೆ ಸದಾ ಕಾಲ ಅರಮನೆಗೆ ಹೋಗುತ್ತಿದ್ದರು. ಅಲ್ಲಿನ ಕಲಾರಚನೆಯ ವೈವಿಧ್ಯತೆಯನ್ನು, ವಾಸ್ತು ವಿನ್ಯಾಸವನ್ನು, ಬಣ್ಣಗಳ ಬೆಡಗನ್ನು ರಾಜದರ್ಭಾರ್‌ನ ದೃಶ್ಯಾವಳಿಗಳನ್ನು ಸ್ವತಃ ಕಣ್ತುಂಬ ನೋಡಲು ಮಾತ್ರವಲ್ಲದೇ ಕಲಾರಚನೆಗೆ ಸ್ಫೂರ್ತಿಯಾಯಿತು.

ಮಾರ್ಗದರ್ಶನದಲ್ಲಿ

ಅರಮನೆಗೆ ಸ್ವಾಮಿಗಳವರು ರಚಿಸಿಕೊಟ್ಟ ಪ್ರತಿ, ಚಿತ್ರ, ಶಿಲ್ಪಗಳಲ್ಲಿಯೂ ಸ್ತಪತಿಯವರ ಪಾತ್ರ ಹಿರಿದು. ಕ್ಯಾನ್‌ವಾಸ್ ಬೋರ್ಡ್ ಸಿದ್ಧಪಡಿಸುವುದರಿಂದ ಹಿಡಿದು ಚಿತ್ರದ ಬಹುಭಾಗ ರಚನೆಯಲ್ಲಿ ತೊಡಗುತ್ತಿದ್ದರು. ಕೆಲವು ವೇಳೆ ಸ್ವಾಮಿಗಳ ಸಲಹೆಯಂತೆ ಚಿತ್ರ ರೂಪಿಸುವ ಪೂರ್ಣ ಹೊಣೆ ಇವರದೇ ಆಗಿರುತ್ತಿತ್ತು. ತತ್ಫಲವಾಗಿಯೇ ಮಹಾರಾಜರು ಸಭೆ ನಡೆಸುತ್ತಿದ್ದ ದರ್ಬಾರ್ ಹಾಲ್ ಸಭಾಂಗಣದ ಮೇಲ್ಭಾವಣೆ ಮೊದಲ್ಗೊಂಡಂತೆ ಅನೇಕ ಕುಶರಿ ಕೆಲಸವುಳ್ಳ (Design) ದೇವತಾ ಮೂರ್ತಿಗಳ ಚಿತ್ರಗಳು, ಬ್ರಹ್ಮ, ವಿಷ್ಣು, ಮಹೇಶ್ವರ ಪ್ರಧಾನ ದೇವರುಗಳ ಸುತ್ತಾ ಪರಿವಾರ ದೇವತೆಗಳು, ಶಿವಪಂಚಾಯತನ ಇವೆಲ್ಲವೂ ಸ್ತಪತಿಯವರ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿದೆ. ಸ್ವಾಮಿಗಳವರ ಸಹೋದರರಾದ ಅಪ್ಪಾಜಿ ಸ್ವಾಮಿ ಎಂಬುವರು ಹಿರಿಯ ಕಲಾವಿದರಾಗಿದ್ದು ಅವರ ಸಲಹೆ ಸಹಕಾರ, ಸ್ತಪತಿಯವರ ಕಾರ್ಯದಕ್ಷತೆ, ಸಿದ್ಧಲಿಂಗ ಸ್ವಾಮಿಗಳವರ ಮಾರ್ಗದರ್ಶನ ತ್ರಿವೇಣಿ ಸಂಗಮದಂತೆ ಒಗ್ಗೂಡಿ, ಅರಮನೆಯ ಅಂಗಳದ ಶೃಂಗಾರವಾಗಲೀ,

ಪೂಜಾಗೃಹದ ಪಾವಿತ್ರತೆಗೊಳಿಸುವ ದೇವತಾಮೂರ್ತಿಗಳಾಗಲೀ, ಅತಿಥಿ ಅಭ್ಯಾಗತರಿಗೆ ಆಹ್ವಾನ ನೀಡುವ ಪರಿಕರಗಳಾಗಲೀ, ಕ್ಷಾತ್ರೀಯ ತೇಜಸ್ಸು ಬಿಂಬಿಸುವ ಸಿಂಹಾಸನವಾಗಲೀ, ಮಹಾರಾಜರ ಪೋಷಾಕುಗಳಾಗಲೀ, ಎಲ್ಲವನ್ನು ಕಲಾತ್ಮಕಗೊಳಿಸುವಲ್ಲಿ ಇವರೆಲ್ಲರ ಪಾತ್ರ ಹಿರಿದಾಗಿದೆ. ಸರ್ವ ಕಾಲಕ್ಕೂ ನೆನಸುವಂತಹದಾಗಿದೆ. ಪ್ರತಿಯೊಂದರಲ್ಲಿಯೂ ಕಲಾತ್ಮಕತೆಯ ಜೊತೆಗೆ ಪಾವಿತ್ರತೆಯ ಪರಮೋತ್ಕೃಷ್ಟತೆಯನ್ನು ಅವರು ರಚಿಸಿದ ಎಲ್ಲಾ ಕೃತಿಗಳಲ್ಲಿ ಕಾಣಬಹುದಾಗಿದೆ.

ಜಂಬೂಸವಾರಿ ಚಿತ್ರಗಳು

ಈ ಲೇಖನದ ಸಂದರ್ಭದಲ್ಲಿ ನಾವು ನೆನೆಸಬೇಕಾದ್ದು ಕಲಾ ದೃಷ್ಟಿಯಿಂದ ಕಂಗೊಳಿಸಿದ ಅರಮನೆಯ ಪ್ರಸಿದ್ಧ ಜಂಬೂಸವಾರಿ ಚಿತ್ರಗಳು 1930 - 50 2ದಶಕಗಳ ಕಾಲ ಕಲಾಸೃಷ್ಟಿಯ ಸುವರ್ಣ ಯುಗ ಎನ್ನಬಹುದು. ದಸರಾ ಮೆರವಣಿಗೆಯ ಬೃಹತ್ ಪ್ರಮಾಣದ ಚಿತ್ರಗಳನ್ನು ಕೇಶವಯ್ಯ (3) ವೈ. ನಾಗರಾಜು (5) ಶಂಕರರಾಜು (5) ಎಸ್.ಆರ್. ಅಯ್ಯಂಗಾರ್ (1) ವೈ. ಸುಬ್ರಮಣ್ಯರಾಜು (4) ಎನ್. ನಂಜುಂಡಸ್ವಾಮಿ (3) ರಚಿಸಿರುವುದನ್ನು ಅರಮನೆಯ ಅಂಗಳದೊಳಗೆ ವೀಕ್ಷಿಸುವಾಗ ಅಂದಿನ ಕಾಲದ ರಾಜ ವೈಭೋಗದ ನೆನಹನ್ನು ತರುವಂತಹದಾದರೆ, ಶ್ರೀ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರು ರಚಿಸಿದ (1941 - 46)ರ, ಅವದಿಯಲ್ಲಿ ಶಕ್ತಿ ದೇವತೆಯರಾದ, ರಾಜ-ರಾಜೇಶ್ವರಿ, ಭುವನೇಶ್ವರಿ, ನವದುರ್ಗಾದೇವಿ, ಕಾಳಿಕಾದೇವಿ, ಗಾಯತ್ರಿ, ಚಾಮುಂಡೇಶ್ವರಿ, ಲಕ್ಷ್ಮಿ, ಸರಸ್ವತಿ ಚಿತ್ರಗಳು, ಮಾನವತ್ವದಿಂದ ದೈವತ್ವ ಕಡೆಗೆ ಮನಸೆಳೆಯುವ ಸುಂದರ ಕಲಾಕೃತಿಗಳಾಗಿ ಹೊರಹೊಮ್ಮುವಲ್ಲಿ ನಾಗೇಂದ್ರ ಸ್ತಪತಿಯವರ ಪಾತ್ರವು ಹಿರಿದಾದದ್ದೆ. ಸ್ವಾಮಿಗಳವರು ಒಪ್ಪಿಕೊಳ್ಳುತ್ತಿದ್ದ ಪ್ರತಿ ಕೆಲಸದಲ್ಲಿಯೂ, ನಾಗೇಂದ್ರ ಸ್ತಪತಿಯವರು

ುಹುಪಾಲು ಜವಾಬ್ದಾರಿ ಹೊರಬೇಕಾಗಿತ್ತು. ಅದು ಚಿತ್ರಕಲೆ, ಶಿಲ್ಪ, ವಾಸ್ತು ಿಲ್ಪ, ಅಥವಾ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ ಸ್ವಾಮಿಗಳವರಿಗೆ ೊರಗಿನಿಂದ ಬರುವ ಪೂಜಾದಿಗಳ ಬೇಡಿಕೆ, ಹೀಗೆ ಹಲವು ಹತ್ತು ುಖಗಳ ಕಾರ್ಯ ವ್ಯಾಪ್ತತೆಯನ್ನೊರುವ ಜವಾಬ್ದಾರಿಯವರದ್ದು. ಈ ಲ್ಲಾ ಹೊಣೆಗಾರಿಕೆ ನಡುವೆಯೂ ಸ್ತಪತಿಯವರು ಕೆಲವು ಸ್ವತಂತ್ರ ೃತಿಗಳನ್ನು ರಚಿಸಿದ್ದಾರೆ. ಅದರಲ್ಲಿ ಮುಖ್ಯವಾದದ್ದು ಶಕ್ತಿದೇವತೆ ಾಮುಂಡೇಶ್ವರಿಯ ಚಿತ್ರ.

ಕ್ತಿ ದೇವತೆ

ನಾಗೇಂದ್ರ ಸ್ತಪತಿಯವರು ಶಕ್ತಿದೇವತೆ ಚಾಮುಂಡೇಶ್ವರಿಯನ್ನು ಿತ್ರಿಸಿದ ರೀತಿ ಸ್ವಾರಸ್ಯಕರವಾಗಿದೆ (1941) ಎಂಟು ಕೈಗಳನ್ನು ಹೊಂದಿರುವ ೇವಿ ರೌದ್ರತೆಯ ಸಾಂಕೇತವಾಗಿ ಕೆಂಪು ಬಣ್ಣದ ಸೀರೆಯನ್ನು ಸಂವೃದ್ಧಿಯ ಂಕೇತವೇನೊ ಎಂಬಂತೆ ಧರಿಸಿದ್ದು, ಹರಿದ್ವರ್ಣದ ರವಿಕೆಯನ್ನು ತೊಟ್ಟು, ೈತುಂಬಾ ಆಭರಣಗಳನ್ನು, ಚಕ್ರಾಯುದಗಳನ್ನು ಹಿಡಿದಿರುವ ಸುಂದರ ಿತ್ರ. ದೇವಿಯ ಹಿಂದೆ ಇರುವ ಸಿಂಹಾಸನದ ಛತ್ರಿಯಂತೂ ಅತಿ ುತ್ತರದಲ್ಲಿದ್ದು, ದ್ವಿರೆಕ್ಕೆಗಳನ್ನು ಹೊಂದಿರುವ ಗಂಧರ್ವರು ಪುಷ್ಪ ೆಲ್ಲುತ್ತಿದ್ದಾರೆ. ಇವೆಲ್ಲವೂ ಸಾಮಾನ್ಯವಾಗಿ ದೇವ ದೇವತೆಗಳನ್ನು ಿತ್ರಿಸುವಾಗ ಇರುವಂತಹವುಗಳೇ ಆಗಿದೆ.

ಆದರೇ ಈ ಚಿತ್ರದಲ್ಲಿ ದೇವಿಯ ಒಂದು ಪಕ್ಕದಲ್ಲಿ ಬಲಕ್ಕೆ ಜಯಚಾಮರಾಜ ಒಡೆಯರ್ ಮತ್ತು ಅವರ ತಂದೆ, ದೊಡ್ಡಪ್ಪ ಾಲ್ವಡಿಕೃಷ್ಣರಾಜ ಒಡೆಯರ್‌ಗಳುಳ್ಳ ಚಿತ್ರ ಸಮೂಹ. ಎಡಭಾಗದಲ್ಲಿ ಶರಥನ ಪರಿವಾರ ರಾಮ, ಲಕ್ಷ್ಮಣರಿದ್ದಂತೆ ಚಿತ್ರಿಸಿದ್ದಾರೆ. ಬಿಲ್ಲನ್ನು ಿಡಿದು ನಿಂತಿರುವ ರಾಜ ತೇಜಸ್ಸಿನ ವ್ಯಕ್ತಿಯನ್ನು ಶ್ರೀ ರಾಮನೆಂದು ಊಹಿಸಬಹುದಾಗಿದೆ.

ಈ ಚಿತ್ರದ ರಚನೆಯನ್ನು ನೋಡಿದಾಗ ಹಿಂದಿನ ಕವಿಗಳಾದ ಪಂಪ, ರನ್ನ, ಜನ್ನ ಮುಂತಾದವರು ಆಯಾಯ ಕಾಲದ ಆಶ್ರಯದಾತ ರಾಜರನ್ನು ರಾಮಾಯಣ, ಮಹಾಭಾರತ ಪಾತ್ರಗಳಿಗೆ ಸಮೀಕರಿಸಿ ಕಾವ್ಯವನ್ನು ಬರೆದಂತೆ ಈ ಚಿತ್ರವನ್ನು ಸಹ ಮೈಸೂರಿನ ಒಡೆಯರ ವಂಶವನ್ನು ರಾಮಾಯಣದ ದಶರಥ'ನ ಕುಟುಂಬಕ್ಕೆ ಹೋಲುವಂತಹ ಸಮೀಕರಣದ ಚಿತ್ರವಿದಾಗಿರಬಹುದು ಎಂದು ಭಾವಿಸಬಹುದಾಗಿದೆ.

ಈ ಚಿತ್ರದಲ್ಲಿ ಮತ್ತೊಂದು ವಿಶೇಷವೆಂದರೇ ಸಿಂಹವಾಹಿನಿ ಪೀಠದ ಮುಂದೆ ತ್ರಿಪಾದವುಳ್ಳ ಮೂರು ಮಣೆಗಳಿದ್ದು ಅದರ ಮೇಲೆ ಒಂದರಲ್ಲಿ ಪಂಚಪಾತ್ರೆ, ಉದ್ಧರಣೆ ತಂಬಿಗೆ ಹೂ ಪೂಜಾ ಪರಿಕರಗಳಿವೆ. ಮತ್ತೊಂದರಲ್ಲಿ ವಿವಿದ ಬಗೆಯ ಹಣ್ಣು ಹಂಪಲುಗಳಿವೆ. ಮೂರನೆಯ ತಟ್ಟೆಯಲ್ಲಿ ಕತ್ತಿಯೊಂದನ್ನು ಇಟ್ಟಿದೆ. ಹೂವು ಹಣ್ಣುಗಳನ್ನು ಸಮರ್ಪಿಸುವುದು, ಭಕ್ತಿಯ ಸಂಕೇತ. ಆದರೇ ಕತ್ತಿಯನ್ನು ದೇವಿಯಲ್ಲಿ ಸಮರ್ಪಿಸುವುದು ಎಷ್ಟು ಸಮಂಜಸ! ಸ್ತಪತಿಯವರ ದೃಷ್ಟಿಯಲ್ಲಿ ರಾಜಕುಟುಂಬದವರು ಶಕ್ತಿಯಿಂದ ರಾಜ್ಯಾಡಳಿತ ನಡೆಸುವುದು ಬೇಡ (ಕತ್ತಿಯು ಶಕ್ತಿ ಪೌರುಷಗಳ ಸಂಕೇತ) ಆ ಶಕ್ತಿಯು, "ದೇವಿಯೇ ನಿನ್ನಲ್ಲಿಯೇ ಇರಲಿ" ನಮಗೆ ಸತ್ಯ ಧರ್ಮಗಳಿಂದ ರಾಜ್ಯವನ್ನಾಳುವ ಶಕ್ತಿಕೊಡು, ರಾಮರಾಜ್ಯವನ್ನಾಗಿ ಮಾಡು ಎಂದು ಪ್ರಾರ್ಥನಾಪೂರ್ವಕವಾಗಿ ನಿಂತು ನಮಿಸುವಂತೆ ಚಿತ್ರಿಸಿದ್ದಾರೆ. ಸುಮಾರು ನಾಲ್ಕೈದು ಅಡಿ ಉದ್ದಗಲವಿರುವ ಈ ತೈಲ ಚಿತ್ರ ಶ್ರೀ ಜಯಚಾಮರಾಜ ಒಡೆಯರ್‌ರವರ ಪುತ್ರರ ಖಾಸಗೀ ಕಲಾಗ್ಯಾಲರಿಯಲ್ಲಿ ನೋಡಬಹುದಾಗಿದೆ.

ಕಥಾ ಚಿತ್ರ

ನಾಗೇಂದ್ರ ಸ್ತಪತಿಯವರು ಭಾವಚಿತ್ರವನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿ ಕೊಟ್ಟಿರುವವರಾದರೂ, ಅವುಗಳು ಖಾಸಗಿ ಸಂಗ್ರಹಗಳಾಗಿವೆ. ಕೆಲವು

ತ್ತಿಚಿತ್ರಗಳನ್ನು ರಚಿಸಿದ್ದಾರೆ. ಗುರುಕುಲದ ಪಕ್ಕದಲ್ಲಿಯೇ ಇರುವ ಚಿಕ್ಕ ಸವೇಶ್ವರನ ಗರ್ಭಗುಡಿಯ ಮುಂಭಾಗದಲ್ಲಿ ಶಿವಲೀಲೆಯನ್ನು ಕುರಿತ ತ್ರಗಳನ್ನು ಗೋಡೆಯ ಮೇಲೆ ತೈಲವರ್ಣದಲ್ಲಿ ಚಿತ್ರಿಸಿದ್ದರು. ಇದೊಂದು ಪರೂಪದ ಕಥಾ ಮಾಲಿಕೆಯ ಚಿತ್ರವಾಗಿದ್ದರೂ, ಆಧುನಿಕಗೊಳಿಸುವ ವಾಂತರದಲ್ಲಿ ಆ ಚಿತ್ರವೆಲ್ಲವೂ ನಾಶಗೊಂಡಿರುವುದು ನಮ್ಮಲ್ಲಿರುವ ಲಾಪ್ರಜ್ಞೆಗೆ ಹಿಡಿದ ಕನ್ನಡಿಯಾಗಿದೆ.

ಕ್ಷಿಣಾಮೂರ್ತಿ

ನಾಗೇಂದ್ರ ಸ್ತಪತಿಗಳವರು ರಚಿಸಿದ ತೈಲ ಚಿತ್ರ ದಕ್ಷಿಣಾಮೂರ್ತಿ ುಮಾರು ಎರಡಡಿ ಅಗಲ ನಾಲ್ಕು ಅಡಿ ಉದ್ದವಿದ್ದು ಆಲದ ಮರದ ುಡದಲ್ಲಿ ವೀಣಾಪಾಣಿಯಾದ ದಕ್ಷಿಣಾಮೂರ್ತಿಯು ತನ್ನ ಎರಡು ಾಲುಗಳನ್ನು ಕತ್ತರಿಯಂತೆ ಸ್ವಸ್ತಿಕಾಸನದಲ್ಲಿ ಕುಳಿತಂತೆ ಇದ್ದು ವ್ಯಾಘ್ರ ರ್ಮವನ್ನು ದರಿಸಿ, ವ್ಯಾಘ್ರ ಚರ್ಮದ ಮೇಲೆ ಕುಳಿತಂತೆ ಇದೆ. ಎರಡು ುಂಡಿ ಮತ್ತು ದೇಹವನ್ನು ಬಂದಿಸಿದ ಯೋಗಪಟ್ಟವು ಕೆಂಪು ವಸ್ತ್ರದಂತೆ ಂಡುಬರುತ್ತದೆ. ಮಡಚಿದ ಮಂಡಿಯ ಮೇಲೆ ಕೆಳಬಲ ಹಸ್ತವೊಂದು ಜ್ಞಾನ ುದ್ರೆಯುಳ್ಳ ಅಭಯಹಸ್ತವನ್ನೊಂದಿದೆ. ಇನ್ನೊಂದು ಬಲಹಸ್ತದಲ್ಲಿ ಕ್ಷರಮಾಲೆಯಿದೆ. ಎಡಹಸ್ತವೊಂದರಲ್ಲಿ ವೀಣೆಯನ್ನು ಹಾಗೆಯೇ ುಂಡಿಯ ಮೇಲೆ ಕೈ ಊರಿದಂತೆ ಕಾಣುವ ಹಸ್ತದಲ್ಲಿ ಶಾಸ್ತ್ರದ ಕಟ್ಟನ್ನು ಡಿದಿರುವಂತೆ ಚಿತ್ರಿಸಿದ್ದಾರೆ. ತ್ರಿನೇತ್ರದಾರಿಯಾದ ದಕ್ಷಿಣಾಮೂರ್ತಿಯ ುಖದಲ್ಲಿ ಕಿರುನಗೆಯಿದ್ದು, ಕರ್ಣಗಳಲ್ಲಿ ರುದ್ರಾಕ್ಷಿಯನ್ನು ಕೊರಳಲ್ಲಿ ುಣಿರತ್ನ ಮಾಲೆ ದರಿಸಿದಂತಿದೆ. ಶಿರಸ್ಸಿನ ಜಟೆಯನ್ನು ಗಂಗೆಯಂತಿರುವ ್ರೀರೂಪದ ಚಿತ್ರವಿದೆ. ಈಶ್ವರನ ಒಂದುರೂಪವೇ ಆಗಿರುವಂತೆ, ಚಿತ್ರವನ್ನು ಚ್ಚಾದ ಶ್ವೇತವರ್ಣಗಳಿಂದ ಚಿತ್ರಿಸಿದ್ದಾರೆ. ಕೊರಳಲ್ಲಿ ಮಾತ್ರ ಅತ್ಯಲ್ಪ ಪ್ರಮಾಣದ ಕಪ್ಪು ಛಾಯೆಯಂತೆ ಕಾಣುವ ಗಾಡ ನೀಲಿಯ ಬಣ್ಣವು

ಲೇಪಿತವಾಗಿದ್ದು. ವಿಷಕಂಠ ಎಂಬ ಅನ್ವರ್ಥನಾಮಕ್ಕೆ ಅನುಗುಣವಾಗಿ ಚಿತ್ರಿಸಿದ್ದಾರೆ. ಭಸ್ಮಾಂಗ ಲೇಪಿತ ದಕ್ಷಿಣಾಮೂರ್ತಿಯ ಹಿನ್ನೆಲೆಯಲ್ಲಿ ಆಲದ ಮರವಿದ್ದು, ಶ್ವೇತವರ್ಣಕ್ಕೆ ಒಳ್ಳೆಯ ಹಿನ್ನೆಲೆ ಒದಗಿಸುತ್ತದೆ. ಸರ್ಪವೊಂದು ಹೆಡೆಬಿಚ್ಚಿ ದಕ್ಷಿಣಾಮೂರ್ತಿಯ ಶಿರೋಭಾಗವನ್ನು ರಕ್ಷಿಸುವಂತೆ ತೋರುತ್ತದೆ.

ದಕ್ಷಿಣಾಮೂರ್ತಿಯ ಮುಂದೆ ಅಕ್ಕ ಪಕ್ಕಗಳಲ್ಲಿ ಶಾಸ್ತ್ರ ರಹಸ್ಯವನ್ನು ತಿಳಿಯಲು ಉತ್ಸುಕರಾಗಿರುವ ಜಮದಗ್ನಿ, ನಾರದ, ವಶಿಷ್ಠ, ಭೃಗು, ಭಾರದ್ವಾಜ, ಸನದಿ, ಅಗಸ್ತ್ಯ, ಕೌಶಿಕ, ಕಾಶ್ಯಪ, ಅತ್ರಿ, ಗೌತಮ, ಪುಲಸ್ತ್ಯ, ವಿಶ್ವಾಮಿತ್ರ, ಅಂಗೀರಸ ಇತ್ಯಾದಿ ಋಷಿಪುಂಗವರು ಕರ ಮುಗಿದು ಶಿರಬಾಗಿ ನಿಂತಿರುವುದನ್ನು ಹಾಗೆಯೇ ದೀರ್ಘದಂಡ ನಮಸ್ಕಾರ ಮಾಡುತ್ತಿರುವುದನ್ನು ಚಿತ್ರಿಸಿದ್ದಾರೆ. ಎಲ್ಲಾ ಋಷಿಮುನಿಗಳು ತಮ್ಮ ಉತ್ತರೀಯದಿಂದ ನಡುವನ್ನು ಕಟ್ಟಿರುವುದು ಗೌರವ ಸೂಚಕ, ಭಕ್ತಿ ಪೂರ್ವಕ ಸಂಕೇತದಂತಿದೆ. ಸ್ತಪತಿಗಳವರ ಕುಂಚದಿಂದ ಮೂಡಿದ ಉತ್ತಮ ಚಿತ್ರವಿದು.

ಪ್ರಭಾವ

ಶ್ರೀ ಸಿದ್ಧಲಿಂಗ ಸ್ವಾಮಿಗಳವರ ವಿಷಯವನ್ನು ಹಾಗೂ ನಾಗೇಂದ್ರ ಸ್ತಪತಿಗಳವರ ವಿಚಾರವನ್ನು ಬರೆಯುವಾಗ ಪ್ರತಿ ಚಿತ್ರ ಮತ್ತು ಶಿಲ್ಪಗಳಲ್ಲಿ ಒಂದಕ್ಕೊಂದು ತಾಳೆಯಾಗುತ್ತಾ ಹೋಗುತ್ತವೆ. ಅರಮನೆಗಾಗಿ ರಚಿಸಿದ ಅಪರೂಪದ ಚಿತ್ರಗಳು ಮತ್ತು ಶಿಲ್ಪಗಳು ಅಧಿಕ ಸಂಖ್ಯೆಯಲ್ಲಿದ್ದು ಸ್ವಾಮಿಗಳವರ ಮಾರ್ಗದರ್ಶನದಲ್ಲಿ ನಾಗೇಂದ್ರಸ್ತಪತಿಯವರ ಹಸ್ತಕೌಶಲ್ಯ ಕೆಲಸ ಮಾಡುತ್ತಿತ್ತು. ಜೊತೆಗೆ ಕೆಲವು ಕಲಾವಿದರು, ಶಿಲ್ಪಿಗಳು ಸಹಾಯಕರಾಗಿರುತ್ತಿದ್ದರು. ಹಾಗಾಗಿ ನಾಗೇಂದ್ರ ಸ್ತಪತಿಯವರ ಪ್ರತ್ಯೇಕ ಅಸ್ತಿತ್ವ ಕಂಡು ಬರುವುದು ಸ್ವಾಮಿಗಳವರು ಶಿವೈಕ್ಯರಾದ ನಂತರದಿಂದ.

ಚಿತ್ರದ ದೃಷ್ಟಿಯಿಂದ ಅರಮನೆಯಲ್ಲಿರುವ ಕೆಲ ಚಿತ್ರಗಳನ್ನು ಅದರಲ್ಲಿಯೂ ಗಾಯತ್ರಿಯ ಚಿತ್ರವನ್ನು ವಿಮರ್ಶನ ದೃಷ್ಟಿಯಿಂದ ವೀಕ್ಷಿಸಿದರೇ ಕೆಲ ಅಂಶಗಳು ಗೋಚರವಾಗುತ್ತವೆ. ಸ್ವಾಮಿಗಳವರ ಕಲಾರಚನಾ ಶೈಲಿಗೂ, ನಾಗೇದ್ರ ಸ್ತಪತಿಯವರ ಕಲಾರಚನೆಗೂ ಕೆಲ ವ್ಯತ್ಯಾಸಗಳು ಮುಖದ ರಚನೆಯಲ್ಲಿ ಕಂಡುಬರುತ್ತದೆ. ಆದರೇ ಮೂಲ ತತ್ವ, ಸಿದ್ಧಾಂತಗಳು ಒಂದೇ ಆಗಿರುತ್ತವೆ.

ಗಾಯತ್ರಿ ಅವತರಣಿಕೆ ಕುರಿತು ಕಾಶ್ಯಪ ಶಿಲ್ಪಶಾಸ್ತ್ರ ಹೀಗೆ ಹೇಳುತ್ತದೆ. ಸೃಷ್ಟಿ, ಸ್ಥಿತಿ, ಲಯ, ಶಿರೋಧಾನ, ಅನುಗ್ರಹ ಈ ಪಂಚಕಾರ್ಯಗಳ ಕಾರಣರು ಬ್ರಹ್ಮ, ವಿಷ್ಣು, ಶಿವ, ಇಂದ್ರ, ಸೂರ್ಯರೆಂದು ಈ ಐದರ ಸಮಸ್ಯಯೇ ವಿಶ್ವಕರ್ಮ ಪರಮೇಶ್ವರ, ಅಂತೆಯೇ, ಅವರುಗಳ ಪತ್ನಿಯರಾದ ಸರಸ್ವತಿ, ಲಕ್ಷ್ಮಿ, ಪಾರ್ವತಿ, ಶಚೀ, ಸಂಜ್ಞಾದೇವಿ ಇವುಗಳ ಸಮಸ್ಯೆಯೇ ಗಾಯತ್ರಿಯಾಗಿದೆ.

ಸ್ವಾಮಿಗಳವರು ಬರೆದಿರುವ ಶಾಸ್ತ್ರೋಕ್ತವಾದ ಈ ಗಾಯತ್ರಿಯಲ್ಲಿ ಸರಸ್ವತಿ, ಲಕ್ಷ್ಮಿ, ಪಾರ್ವತಿಯವರು ಆಕಾಶಗಾಮಿಯಾಗಿ ಆಗಮಿಸಿದಂತೆ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಮುನ್ನೆಲೆಯಲ್ಲಿ ಪಂಚಮುಖಿಗಳ ಗಾಯತ್ರಿಯ ಸುಂದರ ಚಿತ್ರವಿದೆ. ತೌಲನಿಕವಾಗಿ ನೋಡಿದಾಗ ಸ್ತಪತಿಯವರು ಹಿನ್ನೆಲೆಯ ಚಿತ್ರಗಳನ್ನು ರಚಿಸಿದ್ದಾರೆಂದು ಹೇಳಬಹುದಾಗಿದೆ.

ಸರಸ್ವತಿ

ಹಂಸ ವಾಹನೆಯಾಗಿರುವ ಸರಸ್ವತಿ ದ್ವಿ ಬಾಹುಗಳುಳ್ಳವಳಾಗಿ ಮಾಲೆ ಸರ ಮತ್ತು ಕಮಂಡಲ ಪಿಡಿದವಳಾಗಿ, ಸುಖಾಸೀನ ಮುದ್ರೆಯಲ್ಲಿರುವಂತೆ ಚಿತ್ರಿಸಿದ್ದಾರೆ. ಕೆಂಪುಸೀರೆ ದರಿಸಿ, ಕಿರೀಟಯುಕ್ತಳಾಗಿ, ಮಂದಸ್ಮಿತ ನಗೆಯಿಂದ ಆಗಮಿಸುವಂತಿದೆ.

ಲಕ್ಷ್ಮಿ

ಗರುಡವಾಹನೆಯಾಗಿ ಲಕ್ಷ್ಮಿಯು, ಶಂಖ, ಚಕ್ರ, ಪದ್ಮ, ಗಧಾದಾರಿಯಾಗಿ ಹಳದಿ ವಸ್ತ್ರದರಿಸಿ, ಕೆಂಪು ರವಿಕೆ ತೊಟ್ಟು ಸರ್ವಾಭರಣ ಸುಂದರಿಯಾಗಿ, ವೈಕುಂಠದ ಮಾರ್ಗವಾಗಿ ಬರುತ್ತಿರುವಂತೆ ಚಿತ್ರಿಸಿದ್ದಾರೆ. ಗರುಡ ಚಾಚಿಕೊಂಡಿರುವ ದ್ವಿರೆಕ್ಕೆಗಳು ಅವುಗಳಿಗೆ ಉಪಯೋಗಿಸಿದ ಪೂರಕವಾದ ಗಾಡವರ್ಣಗಳು ಚಿತ್ರಕ್ಕೆ ಶೋಭೆ ತಂದಿವೆ.

ಪಾರ್ವತಿ

ವೃಷಭನ (ನಂದಿ)ಮೇಲೆ ಕುಳಿತು ಆಗಮಿಸುತ್ತಿರುವ ಪಾರ್ವತಿಯು ಚತುರ್ ಬಾಹುಗಳನ್ನು ಹೊಂದಿದ್ದು. ಪಾಶಾಂಕುಶ, ತ್ರಿಶೂಲ, ಡಮರುಗಳನ್ನು ಹಸ್ತಗಳಲ್ಲಿ ಪಿಡಿದು, ಕಿರೀಟ ಯುಕ್ತಳಾಗಿ, ಶ್ವೇತವಸ್ತ್ರಧಾರಣೆಯಾಗಿರುವಂತೆ ಚಿತ್ರಿಸಿದ್ದು, ವರ್ಣಗಳ ಶುದ್ಧತೆಯನ್ನು ಕಾಣಬಹುದಾಗಿದೆ. ವಾಹನವಾಗಿರುವ ನಂದಿಯು ಸಹ ನಡೆದು ಬರುತ್ತಿರುವಂತೆ ಚಲನ ಶೀಲವಾಗಿದ್ದು, ಶ್ವೇತವರ್ಣಯುಕ್ತವಾಗಿದೆ.

ಮೂರು ಚಿತ್ರಗಳು ಗಾಯತ್ರಿ ಚಿತ್ರದ ಮೇಲ್ಭಾಗದಲ್ಲಿದ್ದು, ಆಕಾಶದಿಂದ ಆಗಮಿಸಿದ ಈ ದೇವತೆಯರು ಗಾಯತ್ರಿದೇವಿಗೆ ಶುಭಹಾರೈಸುವಂತೆ, ಶಕ್ತಿ ನೀಡುವಂತೆ ಚಿತ್ರಿಸಿರುವ ಶೈಲಿ, ರಚನಾ ವಿಧಾನ ಗುಂಗುರು ಗುಂಗುರಾಕಾರವಾಗಿ ಈ ದೇವತೆಗಳ ಸುತ್ತಲೂ ಕವಿದಿರುವ ಮೋಡದ ವಾತಾವಾರಣ ಅವುಗಳಿಗೆ ಬಳಸಿದ ವರ್ಣ ನೈಜತೆಯ ನೆಲೆಗಟ್ಟನ್ನೊಂದಿದೆ. ನಾಗೇಂದ್ರ ಸ್ತಪತಿಯವರ ಇನ್ನಿತರ ಚಿತ್ರಗಳನ್ನು ನೋಡಿದಾಗ ಕಾಣುವ ಮುಖ ಹೋಲಿಕೆ, ವರ್ಣಶೋಭೆ ಇವುಗಳಲ್ಲಿಯೂ ಕಂಡು ಬರುತ್ತದೆ.

ಕವಿ, ಸಾಹಿತಿ, ಪುರಾಣಿಕ ಮೊದಲಾದವರು ಅಪರಿಮಿತವಾದ ಶಬ್ದ ಪ್ರಯೋಗಗಳಿಂದ ವ್ಯಾಖ್ಯಾನಿಸಿದರೂ, ಆ ಕವಿಯ ಕಲ್ಪನೆಗೆ ಅನುಗುಣವಾಗಿ, ಕಲಾವಿದ ತಾನು ಆ ಕಾವ್ಯವನ್ನು ಓದಿ ಅರಗಿಸಿಕೊಂಡಂತೆ ಅದನ್ನು ತನ್ನ ಕುಂಚದಂಚಿನಿಂದ ಚಿತ್ರದ ರೂಪದಲ್ಲಿ ಮೂಡಿಸಿದಾಗ ಸಿಗುವ ಆನಂದವೇ ಬೇರೆ. ಇದೊಂದು ದೃಶ್ಯಕಾವ್ಯವಾಗಿ ಹೊರಹೊಮ್ಮುತ್ತದೆ. ಅಕ್ಷರ ಜ್ಞಾನವಿಲ್ಲದವನೂ ಸಹ ಆ ದೃಶ್ಯವನ್ನು ನೋಡಿ ಆನಂದಿಸಬಲ್ಲ ಆಸ್ವಾದಿಸಬಲ್ಲ, ಹಾಗೆಯೇ ತನಗಾದ ಅನುಭವವನ್ನು ಇತರರಿಗೂ ಹೇಳಬಲ್ಲ ಎಂಬುದಕ್ಕೆ ಈ ಎಲ್ಲಾ ಚಿತ್ರಗಳು ಜೀವಂತ ಸಾಕ್ಷಿಯಾಗಿವೆ.

ಲಭ್ಯವಿಲ್ಲದ ಚಿತ್ರಗಳು

ನಾಗೇಂದ್ರ ಸ್ತಪತಿಯವರು ಅರಮನೆಗೆ ಸತ್ಯಹರಿಶ್ಚಂದ್ರನ ಕಥಾ ವೃತ್ತಾಂತವನ್ನೊಳಗೊಂಡ ಚಿತ್ರರಚಿಸಿಕೊಟ್ಟರೆಂದು ತಿಳಿದು ಬರುತ್ತದೆಯಾದರೂ ನೋಡಲು ಲಭ್ಯವಾಗುವುದಿಲ್ಲ. ಹಾಗೆಯೇ ಮಹಾರಾಜ ಪ್ರೇಂ ವರ್ಕ್ಸ್‌ನವರಿಗಾಗಿ, ಬೆಂಗಳೂರಿನಲ್ಲಿ ಕೆಲಕಾಲವಿದ್ದು, ಕ್ಯಾಲೆಂಡರ್‌ಗಾಗಿ ಕೆಲವು ಚಿತ್ರಗಳನ್ನು ರಚಿಸಿಕೊಟ್ಟರೆಂದು ಅವರ ಕುಟುಂಬದವರ ಮೂಲಕ ತಿಳಿಯುತ್ತದೆಯಾದರೂ, ಮುದ್ರಿತ ಕ್ಯಾಲೆಂಡರ್‌ಗಳ ಪ್ರತಿಗಳು ದೊರೆಯುತ್ತಿಲ್ಲ. ಅವುಗಳೆಲ್ಲವನ್ನು ಸಂಗ್ರಹಿಸಿಡಬೇಕೆಂದು ಇರಾದೆಗಳು ಆಗ್ಗೆ ಇರಲಿಲ್ಲವೆನ್ನಬಹುದು. ಯಾರ್‍ಯಾರು ಬೇಡಿಕೆ ವ್ಯಕ್ತಪಡಿಸುತ್ತಾರೋ ಆಯಾಯ ಗ್ರಾಹಕರ ಮನೋಭಿಲಾಷೆಗನುಗುಣವಾಗಿ ಚಿತ್ರವನ್ನಾಗಲೀ, ಶಿಲ್ಪಾವನ್ನಾಗಲೀ, ರಚಿಸಿ ಕೊಟ್ಟರಾಯಿತು. ಅವರು ಕೊಟ್ಟ ಅತ್ಯಲ್ಪ ಹಣದಿಂದಲೇ ಸಂತೃಪ್ತಿ ಎಂಬ ಅಂಶವನ್ನು ಗಮನಿಸಬಹುದಾಗಿದೆ. ಅವುಗಳ ಮಾಹಿತಿಯ ಡೈರಿ ಬರೆಯುವ ವಾಡಿಕೆ ಎಲ್ಲೂ ಕಂಡುಬರುವುದಿಲ್ಲ.

ನಾಗೇಂದ್ರ ಸ್ತಪತಿಯವರ ಚಿತ್ರಗಳು ಲಭ್ಯವಾಗದಿರುವುದು ಮಾತ್ರವಲ್ಲ ಆ ಕಾಲದ ಹಿರಿಯ ಕಲಾವಿದರಾದ ಎಫ್. ಬಿ. ಯಲವಟ್ಟಿ (ಫಕೀರಪ್ಪ- ಭರಮಪ್ಪ - ಯಲವಟ್ಟಿ) ಯವರ ಅಪರೂಪದ ಜಲವರ್ಣದ ನಿಸರ್ಗದೃಶ್ಯಗಳು ಎಸ್. ಜಿ. ಟಂಕಸಾಲೆ. (ಶ್ರೀನಿವಾಸರಾವ್ ಗುರುರಾವ್ ಟಂಕಸಾಲೆ) ಯವರ ವಾಸ್ತು ಕಟ್ಟವನ್ನೊಳಗೊಂಡ ಭೂದೃಶ್ಯಗಳು, ಅರಮನೆಯ ಶಿಲ್ಪಿಗಳಾಗಿ ಕೆಲಕಾಲ ಕೆಲಸ ನಿರ್ವಹಿಸಿದ ಬಿ. ಬಸಪ್ಪನವರ ಇನ್ನಿತರ ಶಿಲ್ಪಗಳು ಎಲ್ಲೆಲ್ಲಿ ಅಡಕಗೊಂಡಿವೆಯೆಂಬುದಾಗಲೀ, ಯಲವಟ್ಟಿಯವರ ಸ್ನೇಹಿತ ಕಲಾವಿದರಾದ ಎಸ್. ಆರ್. ಲಕ್ಷ್ಮಣರಾವ್ (ನಾಗರಕಟ್ಟೀ -ರಾಮಕೃಷ್ಣರಾವ್, ಲಕ್ಷ್ಮಣರಾವ್) ಇವರ ಚಿತ್ರಗಳಾಗಲೀ, ಹೆಚ್. ಎಸ್. ಇನಾಮತಿ, (ಹರಿರಾವ್, ಶಾಮರಾವ್, ಇನಾಮತಿ)ಯವರ ನಿಸರ್ಗ ಚಿತ್ರ ಮತ್ತಿತರ ಹೆಚ್ಚಿನ ಮಾಹಿತಿಯಾಗಲೀ, ಚಿಕ್ಕಮಗಳೂರು ಮೂಲದವರಾದ ಹುಲಿಗೆರೆ ಬಿ. ಸಿದ್ಧಪ್ಪನವರು ಅಂದಿನ ಪ್ರಸಿದ್ಧ ಕಲಾವಿದ ದುರಂದರ್ ಅವರ ಶಿಷ್ಯರಾಗಿದ್ದು ಆ ಕಾಲದಲ್ಲಿ ರಚಿಸಿದ ಮತ್ತು ಗಳಿಸಿದ ಬಹುಮಾನದ ಕೃತಿಗಳಾಗಲೀ, ಮಂಡ್ಯದ ಮೂಲದವರಾದ ಪಿ.ವಿ. ಕೇಶವಮೂರ್ತಿಗಳ ಚಿತ್ರಗಳ ಮಾಹಿತಿಗಳಾಗಲೀ, ನಿಖರವಾಗಿ ದೊರಕುವುದಿಲ್ಲ. ಹೀಗೆಯೇ ಇನ್ನೂ ಅನೇಕ ಕಲಾವಿದರು ಶಿಲ್ಪಿಗಳು ಸಿದ್ಧಲಿಂಗಸ್ವಾಮಿಗಳ ಹಿರಿಯ ಕಿರಿಯ ಸಮಕಾಲೀನರೇ ಆಗಿದ್ದು ಮೈಸೂರಿನ ಚಾಮರಾಜೇಂದ್ರ ವೃತ್ತಿಕಲಾ ಶಾಲೆ ಮತ್ತು ಅರಮನೆಗಳಲ್ಲಿ ಸಂಪರ್ಕವಿಟ್ಟುಕೊಂಡಿದ್ದವರಾದರೂ, ಲೇಖನಕ್ಕೆ ಅವಶ್ಯವಕವಾದ ಮಾಹಿತಿಗಳು ಲಭ್ಯವಾಗದಿರುವುದು ವಿಶಾದದ ಸಂಗತಿಯಾಗಿದೆ.

ಸ್ತಪತಿಯವರು ರಚಿಸಿದ ಕೆಲವು ವಾಣಿಜ್ಯ ಚಿತ್ರಗಳು ಕ್ಯಾಲೆಂಡರ್ ಆಗಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿದ ಪರಿಣಾಮವಾಗಿ ಸ್ವತಂತ್ರವಾಗಿ ತಾವೇ ಮುದ್ರಣಾಲಯವನ್ನು ಮಾಡಬೇಕೆಂಬ ಉತ್ಸಾಹ ಅವರಲ್ಲಿತ್ತು. ಆದರೆ ಯಾವುದನ್ನು ಸ್ವಾಮಿಗಳವರ ಅನುಮತಿಯಿಲ್ಲದೇ ಮಾಡುವಹಾಗಿಲ್ಲವಾಗಿ,

ತಮ್ಮ ಮನದಭಿಪ್ರಾಯವನ್ನು ವ್ಯಕ್ತಪಡಿಸಿದಾಗ ಸ್ವಾಮಿಗಳು ನಾವು ಕೈಯಲ್ಲಿಯೇ ಪ್ರಿಂಟ್ ತೆಗೆಯುವ ಕೆಲಸವನ್ನಿಟ್ಟುಕೊಂಡಿರುವಾಗ ಕೃತಕವಾದ ಮುದ್ರಣವಾದರೂ ಏಕೆ ಬೇಕು ಎಂದು ತಿಳಿಸಿ ವಾಣಿಜ್ಯವಾಗುವ ಕಲೆಯನ್ನು ತಪ್ಪಿಸಿದರೆಂದು ತಿಳಿದು ಬರುತ್ತದೆ. (ಪಿ. ಆರ್. ತಿಪ್ಪೇಸ್ವಾಮಿ, ಕರ್ಮವೀರ 10-9-1972)

ಕೈಯಲ್ಲಿರುವ ಮುದ್ರಣಯಂತ್ರ

ಸ್ವಾಮಿಗಳು ತಮ್ಮ ಕೈಯಲ್ಲೇ ಮುದ್ರಣಯಂತ್ರವಿದೆ ಎನ್ನುವಲ್ಲಿ ಅವರಿಗೆ ತಮ್ಮ ಕಲಾಶಕ್ತಿಯ ಬಗ್ಗೆ ಅದೆಷ್ಟು ನಂಬಿಕೆ, ಎಷ್ಟು ಚಿತ್ರವನ್ನಾದರೂ ಹೊಸದಾಗಿ ಬರೆದುಕೊಡಬಲ್ಲೆವೆಂಬ ಆತ್ಮವಿಶ್ವಾಸವಿತ್ತೆಂಬುದನ್ನು ಗಮನಿಸಬೇಕಾದ ಅಂಶ. ಇದು ಸಾಧಾರಣವಾದ ಮಾತಲ್ಲ. ಸ್ವಾಮಿಗಳಂತೆಯೇ ಸ್ತಪತಿಗಳವರು ಸಹ ಚಿತ್ರಕಲಾ ನಿಪುಣರಾಗಿದ್ದರೆಂಬುದಕ್ಕೆ ಪೂರಕವಾಗಿ ಅವರ ಶಿಲ್ಪಗಳು ಸಾಕ್ಷಿಗಳಾಗಿವೆ.

ಶಿಲ್ಪರಚನೆ ಎಂದರೇ ಚಿತ್ರರಹಿತವಾಗಿ ಮಾಡತಕ್ಕದ್ದಲ್ಲ. ಚಿತ್ರಕಲೆ ಗೊತ್ತಿಲ್ಲದವನು ವಿಗ್ರಹಲಕ್ಷಣಗಳನ್ನರಿಯಲಾರ. ನೃತ್ಯ ಗೊತ್ತಿಲ್ಲದವನು ಚಿತ್ರಕಲೆಯನ್ನು ತಿಳಿಯಲಾರ. ಸಂಗೀತ ತಿಳಿಯದವನು ನೃತ್ಯವನ್ನರಿಯಲಾರ ಎಂಬ ಮಾತನ್ನು ನಮ್ಮ ಮೂಲಗ್ರಂಥವಾದ ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಹೇಳಿದೆ. ಸಂಗೀತ, ನೃತ್ಯ ಚಿತ್ರಗಳು, ಶಿಲ್ಪಗಳ ರಚನೆಗೆ ಒಂದಕ್ಕೊಂದು ಹೇಗೆ ಪೂರಕ ಎಂಬ ವಿಚಾರವನ್ನು ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

ಆಕಾರಕ್ಕೆ ತಕ್ಕ ಕಲ್ಲು ಶಿಲ್ಪಿಯಾದವನಿಗೆ ಚಿತ್ರಕಲೆಯಂತೂ ಅತ್ಯಾವಶ್ಯಕ ಎಂಬುದರಲ್ಲಿ ಸಂದೇಹವೇ ಇಲ್ಲ. ಯಾವುದೇ ಶಿಲ್ಪವನ್ನು ಮಾಡಬೇಕೆನಿಸಿದಾಗ ಗ್ರಾಹಕ ಕೊಟ್ಟ ಅಳತೆ ಮತ್ತು ಆಕಾರ

ಮುಖ್ಯವೆನಿಸುತ್ತದೆ. ಅದಕ್ಕನುಗುಣವಾಗಿ ಚಿತ್ರವನ್ನು ಸಿದ್ಧಪಡಿಸಿಕೊಂಡೇ ಕಲ್ಲನ್ನು ಆಯ್ದುಕೊಳ್ಳಬೇಕು. ನಮ್ಮ ನಿರೀಕ್ಷಣೆಗೆ ತಕ್ಕಂತೆ ಕಲ್ಲು ದೊರೆಯದಿದ್ದಲ್ಲಿ ದೊರಕಿದ ಕಲ್ಲಿನಲ್ಲಿಯೇ ಶಿಲ್ಪವನ್ನು ಮಾಡುವಾಗ ಆತನ ಕಲಾ ಜ್ಞಾನ್ಮೆ ಮಹತ್ತರ ಪಾತ್ರವಹಿಸುತ್ತದೆ. ಹೀಗೆ ಚಿತ್ರಕಲೆ ಶಿಲ್ಪಿಯಾದವರ ಅವಿಭಾಜ್ಯ ಅಂಗವಾಗಿ ಕಲಿಯಲೇ ಬೇಕಾದದ್ದು ಎಂಬ ಅಂಶವನ್ನು ಮನಗಾಣಬೇಕು.

ಸ್ತಪತಿಯವರಿಗೆ ಚಿತ್ರಕಲೆ ಕರತಲಾಮಲಕವಾಗಿದ್ದ ಕಾರಣ ಅವರು ಕೆತ್ತಿದ ಶಿಲ್ಪಗಳು ಒಂದೊಂದು ದಾಖಲಿಸಬಹುದಾದ ಅಪೂರ್ವ ವಿಗ್ರಹಗಳು. ಅದರಲ್ಲಿ ನಂದಿ ವಿಗ್ರಹವು ಸರ್ವೋತ್ಕೃಷ್ಟವಾದದ್ದು. ಹಾಗೆಯೇ ಅರ್ಧನಾರೀಶ್ವರ ಕೂಡಾ ವಾಸ್ತುಶಿಲ್ಪ ವಿನ್ಯಾಸದಲ್ಲಿ ವಿಧಾನಸೌಧದ ನಕ್ಷಾರಚನೆ ಗಮನಾರ್ಹವೆನಿಸುತ್ತದೆ.

ಕಾಮಕಾಮೇಶ್ವರಿ

ಸ್ತಪತಿಯವರ ಬಹುಪಾಲು ಕಲಾಶಿಲ್ಪಗಳು, ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜಗದ್ಗುರು ನಾಗಲಿಂಗ ಸ್ವಾಮಿಗಳವರ ಮಠದ ಪಕ್ಕಕ್ಕೆ ಹೊಂದಿಕೊಂಡಂತೆ ಇರುವ ಕಾಮಕಾಮೇಶ್ವರಿ ದೇವಾಲಯದಲ್ಲಿ ಶೋಭಿಸುತ್ತದೆ. ಶ್ರೀಮನ್ ಮಹಾರಾಜ ಶ್ರೀ ಜಯಚಾಮರಾಜ ಒಡೆಯರವರ ಆಪೇಕ್ಷೆ ಮೇರೆಗೆ, ಶ್ರೀ ಸಿದ್ಧಲಿಂಗಸ್ವಾಮಿಗಳವರ ನೇತೃತ್ವದಲ್ಲಿ ನಿರ್ಮಾಣಗೊಂಡ ದೇವಾಲಯವಿದು.

ಹೊಯ್ಸಳ ಮಾದರಿಯ ಅಪೂರ್ವ ಶಿಲ್ಪಗಳನ್ನು ಮೈಸೂರು ನಗರದ ಏಕೈಕ ಕಲಾ ದೇಗುಲದಲ್ಲಿ ಶಿವ ಪುರಾಣಕ್ಕೆ ಸಂಬಂಧಿಸಿದ ವಿಗ್ರಹಗಳು ರೂಪುಗೊಂಡಿವೆ. ಇಲ್ಲಿನ ವಿಶೇಷತೆ ಎಂದರೆ ಒಂದೊಂದು ಮೂರ್ತಿಗೂ ಒಂದೊಂದು ಮಂಟಪ ಮಾಡಿದ್ದಾರೆ. ಈ ಮಂಟಪಗಳು ದೇವಾಲಯದ

ಗೋಡೆಯ ಹೊರವೈಗೆ ಅಂಟಿಕೊಂಡಂತಿದ್ದರೇ, ಒಳ ಗೂಡಿನಲ್ಲಿ ಒಂದೊಂದು ಮೂರ್ತಿಯನ್ನು ನೆಲೆಗೊಳಿಸಿದ್ದಾರೆ. ಹೀಗೆಯೇ ಪ್ರದಕ್ಷಿಣಾ ಪಥದಲ್ಲಿ ಬರುವಾಗ ಮತ್ತು ಗರ್ಭಗುಡಿಗೆ ಸೇರಿದಂತಿರುವ ನವರಂಗದ ಮಂಟಪದಲ್ಲಿ ಸಹ ಇಂತಹದ್ದೇ ವಿಗ್ರಹ ಸಮುಚ್ಛಯ ಕಾಣಬಹುದು. ತಿರುಗಣೆಯಲ್ಲಿ(Lathe)ಕಡೆದ ಕೊರಡಿನಂತೆ ಕಾಣುವ ಶಿಲಾಸ್ತಂಭಗಳಲ್ಲಿ ತಳಭಾಗ ಚಚ್ಚೌಕವಾಗಿದ್ದು ಅವುಗಳಲ್ಲಿ ಬಳ್ಳಿಯೊಳಗೆ ನರ್ತಿಸುತ್ತಿರುವ, ವಾದ್ಯ ನುಡಿಸುವ, ಮತ್ತಿತರ ಪರಿವಾರ ದೇವತೆಗಳ ಶಿಲ್ಪಗಳನ್ನು ರಚಿಸಿದ್ದಾರೆ.

ಸ್ವಾಮಿಗಳವರ ಅಸಂತೋಷ

ಕಾಮಕಾಮೇಶ್ವರಿ ದೇವಾಲಯದ ಪೂರ್ಣಕಲ್ಪನೆ, ರಚನಾತಂತ್ರ, ವಾಸ್ತುವಿನ್ಯಾಸಗಳ ಮೂಲತಂತ್ರ ಸ್ವಾಮಿಗಳದಾದರೂ, ಆ ದೇವಾಲಯ ನಿರ್ಮಾಣದ ಸ್ಥಾಪತ್ಯ ವಹಿಸಿದವರೇ ನಾಗೇಂದ್ರ ಸ್ತಪತಿಗಳು. ಇವರು ಇತರ ಶಿಲ್ಪಿಗಳಿಗೆ ಮಾರ್ಗದರ್ಶಕರು ರೂವಾರಿಗಳು. ಇಲ್ಲಿನ ನಂದಿಯ ಮೂರ್ತಿಯ ಹಿನ್ನೆಲೆಯಲ್ಲಿ ಸ್ತಪತಿಯವರು ಪಟ್ಟ ಶ್ರಮವನ್ನು ಚಿಂತಿಸುವುದು ಅಗತ್ಯವೆನಿಸುತ್ತದೆ. ಮುಖ ಮಂಟಪಕ್ಕೆ ಹೊಂದಿಕೊಂಡಂತೆ ಇರುವ ನಂದಿ ಮೂರ್ತಿಗೆ ಎಂಟತ್ತಡಿ ಉದ್ದದ ಆರೇಳು ಅಡಿ ಗಾತ್ರದ ಏಕಶಿಲೆ ಅವಶ್ಯಕವಿತ್ತು. ಮೈಸೂರಿಗೆ ಹತ್ತಿರವಾದ ಗಣಿಯೊಂದರಲ್ಲಿ ಕಲ್ಲು ದೊರಕಿತಾದರೂ ಅದು ಸಾಗಿಸುವುದು ಕಷ್ಟವಾಗಿತ್ತು. ಈಗಿನ ಹಾಗೆ ಭಾರ ಎತ್ತುವ ಯಂತ್ರ (CRANE) ಇರಲಿಲ್ಲ. ಹಾಗಾಗಿ ಎಲ್ಲಾ ಕೆಲಸಗಳು ಮುಗಿದು ಬಂದರೂ ನಂದಿ ಮೂರ್ತಿಯ ಕಲ್ಲನ್ನೇ ತರಲಾಗಿರಲಿಲ್ಲ. ಅತ್ಯಂತ ಸೊಗಸಾದ ಶಿಲ್ಪ ರಚಿಸಬೇಕೆಂಬ ಆಸೆ ಇಟ್ಟುಕೊಂಡಿದ್ದ ಸ್ವಾಮಿಗಳು ಜವಾಬ್ದಾರಿ ಹೊತ್ತಿದ್ದ ಸ್ತಪತಿಯವರನ್ನು ಕರೆದು, ನೀನು ನನ್ನ ಆಸೆ ಪೂರೈಸುವುದಿಲ್ಲ. ಯಾವುದೋ ಕಾಟಾಚಾರಕ್ಕೆ ನಂದಿ ವಿಗ್ರಹ ಮಾಡಿ ಪೂರೈಸುವೆ ಎಂದು ಖೇದ ವ್ಯಕ್ತಪಡಿಸಿದರು. (ಶಿಲ್ಪ ಸಂಕುಲ ಪುಟ 29) ಇದು

ಸ್ತಪತಿಯವರಿಗೆ ಒಂದು ರೀತಿಯ ಚಾಲೆಂಜ್ ಆಗಿತ್ತು.

ಸ್ಥಪತಿಯವರ ಸಾಹಸ

ತಿಂಗಳು ಗಟ್ಟಲೇ ಬಂಡೆ ಬಳಿಯಲ್ಲಿಯೇ ಇದ್ದು, ಆನೆಯ ಮೂಲಕ ಹದಿನೈದು ಅಡಿ ಆಳದ ಗಣಿಯಿಂದ ಹೊರತೆಗೆದುದಲ್ಲದೇ, ಅನಾವಶ್ಯಕ ಭಾಗಗಳನ್ನು ಕೆತ್ತಿ ತೆಗೆದು ಅದನ್ನು ಅತ್ಯಂತ ಜಾಗರೂಕತೆಯಿಂದ ಸಾಗಿಸಿ ದೇವಸ್ಥಾನಕ್ಕೆ ತರುವಲ್ಲಿ ಸಫಲರಾದದ್ದು ತಂದೆಯವರಿಗೆ ಸಂತೃಪ್ತಿ ತಂದಿತು.

ವಯೋವೃದ್ದರಾದ ತಂದೆಯವರಿಗೆ ದಿನೇ ದಿನೇ ಕೆಲಸದ ಒತ್ತಡ ಜಾಸ್ತಿಯಾಗುತ್ತಿತ್ತು. ಅರಮನೆಯ ಹಲವಾರು ಕೆಲಸಗಳು, ಸಾರ್ವಜನಿಕವಾಗಿ ವಿಗ್ರಹ ಮಾಡಿಸಲು ಬರುವ ಜನ ಸಮೂಹ, ಜೊತೆಗೆ ಅವರ ಪಾದಪೂಜೆಗಾಗಿ, ತಮ್ಮ ತಮ್ಮ ಊರುಗಳಲ್ಲಿ ಪ್ರತಿಷ್ಠೆ ಮಾಡಿಸಲು ಇತ್ಯಾದಿ ಬೇಡಿಕೆ ಸಲ್ಲಿಸುವವರು ಅಪಾರ. ಜನಪ್ರಿಯತೆಯ ತುಟ್ಟ ತುದಿಗೇರಿದ್ದ ಸ್ವಾಮಿಗಳವರ ವರ್ಚಸ್ಸು ವೃದ್ದಿಸುತ್ತಿತ್ತು. ಆದರೆ ವಯೋವೃದ್ಧತೆಯಿಂದ ಆರೋಗ್ಯ ಕೆಡುತ್ತಾ ಬಂದಿತು. ಮನಸ್ಸು ಕಾರ್ಯದಲ್ಲಿ ತೊಡಗು ಎಂದು ಹೇಳುತ್ತಿದ್ದರೇ, ದೇಹ ಕಾರ್ಯದಿಂದ ವಿಮುಖನಾಗು ಎನ್ನುತ್ತಿತ್ತು.

ಸರ್ವಾಧಿಕಾರಿ

ಈ ದ್ವಂದ್ವಗಳಲ್ಲಿ ಸ್ವಾಮಿಗಳು ತಾವು ಕಟ್ಟಿದ ಮಠ, ಗುರುಕುಲ ಮತ್ತು ಕಲೆ ಶಿಲ್ಪಾದಿಗಳು ನಿರಂತರವಾಗಿ ನಡೆಯಬೇಕೆಂಬ ಮಹದಾಸೆಯಿಂದ ಸ್ತಪತಿಯವರಿಗೆ ಸರ್ವಾಧಿಕಾರಿಯನ್ನಾಗಿ ನಿಯಮಿಸಿ, ಮಠಕ್ಕೋರ್ವ ಪೀಠಾದಿಪತಿಗಳನ್ನು ವ್ಯವಸ್ಥೆಗೊಳಿಸಿದರು. ತಮ್ಮ ಜವಾಬ್ದಾರಿಯನ್ನು ಸ್ತಪತಿಯವರಿಗೆ ವಹಿಸಿದ ಕೆಲವೇ ತಿಂಗಳಲ್ಲಿ (2-5-1952) ಶಿವಸಾಯುಜ್ಯವನ್ನು ಹೊಂದಿದರು.

ಸ್ವಾಮಿಗಳವರು ಶಿವಸಾಯಜ್ಯವನ್ನೊಂದುವ ಸಮಯದಲ್ಲಿ ಶ್ರೀಮನ್ ಮಹಾ ರಾಜರು ಕಾರ್ಯನಿಮಿತ್ತ ಅನ್ಯ ರಾಜ್ಯಕ್ಕೆ ಹೋಗಿದ್ದರು. ತೀವ್ರ ಅನಾರೋಗ್ಯದಿಂದ ಇದ್ದ ಸ್ವಾಮಿಗಳವರನ್ನು ಸಂದರ್ಶಿಸಿ ಬೇಗ ಬರುವುದಾಗಿ ತಿಳಿಸಿಯೇ ಹೋಗಿದ್ದರು. ಆದರೇ ವಿದಿ, ಸಾವು ಎಂಬುದು ಯಾವಾಗ, ಹೇಗೆ ಬರುತ್ತದೆಂಬುದನ್ನು ಬಲ್ಲವರಾರು? ಸ್ವಾಮಿಗಳವರ ಪಾರ್ಥಿವ ಶರೀರದ ಮೆರವಣಿಗೆಯು ಸಕಲ ರಾಜ ಮರ್ಯಾದೆಯೊಡನೆ ನಡೆಯಲು ತಾವಿದ್ದಲ್ಲಿಂದಲೇ ಆದೇಶಿಸಿದರು. ಮೈಸೂರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆದು ಗುರುಕುಲದ ಖಾಲಿ ಇರುವ ಸ್ಥಳದಲ್ಲಿಯೇ ಅವರ ಸಮಾದಿ ಮಾಡುವ ವ್ಯವಸ್ಥೆಯಾಯಿತು. ಅದನ್ನು ಗದ್ದುಗೆ ಮಾಡುವ ಯೋಜನೆ ಸ್ತಪತಿಯವರದಾಗಿತ್ತು.

ಆದರೇ ಸ್ವಾಮಿಗಳವರ ಪ್ರಗತಿಯನ್ನು ಸಹಿಸದ ಒಂದು ವರ್ಗವೇ ಇತ್ತು. ಸದಾ ಕಾಲ ಅವರ ಎಲ್ಲಾ ಕೆಲಸಗಳಿಗೆ ತೊಡಕನ್ನುಂಟು ಮಾಡುವ ಸಮೂಹಕ್ಕೆ ಸ್ವಾಮಿಗಳ ಸಾವು, ವರದಾನವಾಯಿತು. ನಗರ ಮದ್ಯದೊಳಗೆ ಗದ್ದುಗೆ ಮಾಡುವ ವಿಚಾರ, ಅದಕ್ಕೆ ಬೇಕಾದ ಅನುಮತಿ ದೊರೆಯದಂತೆ ಮಾಡಲು ಪ್ರಯತ್ನಿಸಿದರು. ಸ್ವಲ್ಪ ತಡವಾಗಿ ಬಂದ ಮಹಾರಾಜರ ಆದೇಶದವರೆಗೆ ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಸ್ತಪತಿಯವರು ಈ ಸಂದರ್ಭದಲ್ಲಿ ವಹಿಸಿದ ಪಾತ್ರ ಮಹತ್ತರವಾದದ್ದು.

ನಂದಿ ಮೂರ್ತಿ

ನಾಗೇಂದ್ರ ಸ್ತಪತಿಯವರ ಮೇರು ಕೃತಿ. ಅವರ ಸಮಗ್ರ ಕಲಾಸಾಧನೆಯ ಸತ್ಕೃತಿ ನೋಡಿದರೇ ಮತ್ತೊಮ್ಮೆ ಮಗದೊಮ್ಮೆ ನೋಡಬೇಕೆನಿಸುವ ಶಿಲ್ಪ ಕಲಾ ಚಾತುರ್ಯ. ಸುಮಾರು ಐದಡಿ ಎತ್ತರ ಎಂಟಡಿ ಉದ್ದವಿರುವ ನಂದಿ ವಿಗ್ರಹ ಇದುವರೆಗೆ ಪಡೆದಿರುವ ಎಲ್ಲಾ

ವಿಗ್ರಹಗಳಿಗಿಂತ ಉತ್ತಮ ಕಲ್ಕೆತ್ತನೆಯುಳ್ಳದ್ದು, ಯಾವುದೇ ಶಿಲ್ಪಿಯು ಉತ್ತಮ ಚಿತ್ರಗಾರನು ಆಗಿರಬೇಕು. ಚಿತ್ರ ಬರೆಯುವ, ವಾಸ್ತವಿಕತೆ ಅರಿಯುವ ದೃಷ್ಟಿ ಬೆಳೆಸಿಕೊಂಡಾಗ, ಅದನ್ನು ಶಿಲ್ಪದ ಮೂಲಕ ಪರಿಣಾಮಕಾರಿಯಾಗಿ ಮೂಡಿಸಲು ಶಕ್ತವಾಗುತ್ತದೆ, ನೈಜತೆ ಮೂಡುತ್ತದೆ.


ನಂದಿಯು ಎಡಪಾದವನ್ನು ಮೇಲಕ್ಕೆತ್ತಿ ಬಲಪಾದವನ್ನು ಮಂಡಿಯೂರಿ ಮುಖವನ್ನು ಗರ್ಭಗುಡಿಯತ್ತ ತಿರುಗಿಸಿ, ಶಿವನ ಆಜ್ಞೆ ಬಂದೊಡನೆಯೇ ಹೊರಡಲು ಸಿದ್ಧವಾಗಿರುವಂತೆ ಬಾಸವಾಗುವ ಸುಂದರ ಮುಖ ವಿನ್ಯಾಸ, ಎರಡು ಕೊಂಬುಗಳ ಮಧ್ಯೆ ಹೂ, ಬಳ್ಳಿಗಳಿಂದ ಅಲಂಕೃತವಾದ ಕೆತ್ತನೆಯ ಮಧ್ಯದಲ್ಲಿ ಶಿವಲಿಂಗವು ಭ್ರೂ ಮಧ್ಯವನ್ನಲಂಕರಿಸಿದೆ. ಹಾಗೆಯೇ ನಿಮಿರುವ ಕರ್ಣಗಳ ಕೆಳಗೆ ಸರಗುಚ್ಛಗಳು. ಕೊರಳಲ್ಲಿ ಧರಿಸಿರುವ ಜಂಘಿನ ಸರ ಮತ್ತು ಗಂಟೆ ಸರ. ಅವುಗಳಿಗೆ ಹೊಂದಿಕೊಂಡಂತಿರುವ ಸರಪಳಿ, ಒಂದರೊಳಿಗೊಂದು ಹೆಣೆದುಕೊಂಡಿರುವ ಸರಪಳಿಯ ಕೊಂಡಿಗಳು, ನೈಜತೆಯ ಪ್ರತಿರೂಪವಾಗಿದೆ. ಜಂಘಿನ ಗೋಲಿಗಳು ಗಂಟೆಯ ನಾಳಗಳು ಚಲಿಸುವಂತೆ ಶಿಲಾಕೆತ್ತನೆ ಮಾಡಿದ್ದಾರೆ. ಪ್ರಾಯಶಃ ಇಂತಹ ಕಲಾತ್ಮಕ ಕುಸರೀ ಕೆಲಸ ಮತ್ತೆಲ್ಲಿಯೂ ಕಂಡು ಬರುವುದಿಲ್ಲ. ಅವುಗಳ ಕೆಳಗೆ ಮೂರನೇಯದಾದ ಮತ್ತೊಂದು ಸರ, ಅರಳಿ ಎಲೆ ಆಕಾರ ಹೋಲುತ್ತದೆ. ಈ ಪ್ರತಿಯೊಂದು ಎಲೆಯ ಮೇಲೆ ಅಕ್ಷರವಿದೆ, ಅದೇ ಗಾಯತ್ರಿ ಮಂತ್ರ

ತತ್ಪುರಷಾಯ ವಿದ್ಮಹೇ ಚಕ್ರ ತುಂಡಾಯ
ದೀಮಹೀ ತನ್ನೋ ನಂದಿ : ಪ್ರಚೋದಯಾತ್

ಈ ಶ್ಲೋಕವು ನಂದಿಯ ಕೊರಳ ಬಳಸಿದ್ದು, ಮುಖದ ಮುಂಭಾಗದಲ್ಲಿ ಸರಪಳಿ ಮತ್ತು ಸರಗಳು ಕೂಡುವ ಸ್ಥಳದಲ್ಲಿ ಶಿವಲಿಂಗದ ಕೆತ್ತನೆ ಅದರ ಕೆಳಗೆ ದೊಡ್ಡದಾದ ಗಂಟೆಯೊಂದಿದೆ.




ೀ ನಾಗೇಂದ್ರ ಸ್ಥಪತಿಗಳಿಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ನೀಡುತ್ತಿರುವವರು ಆಗಿನ ಹಣಕಾಸು
ಚಿವರಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆ ಹಾಗೂ (೧೯೬೬) ಮಂತ್ರಿಗಳಾದ ಶ್ರೀ ಕಂಠಿಯವರನ್ನು ಕಾಣಬಹುದು



ಸಿದ್ಧಲಿಂಗ ಸ್ವಾಮಿಗಳವರು ತಮ್ಮ ಪುತ್ರ ಶ್ರೀ ನಾಗೇಂದ್ರ ಸ್ಥಪತಿಗಳು, ಬಂಧುಗಳು ಹಾಗೂ ಶಿಷ್ಯರುಗಳೊಂದಿಗೆ



ದಕ್ಷಿಣಾಮೂರ್ತಿ ಕಾಮಕಾಮೇಶ್ವರಿ ದೇವಸ್ಥಾನ, ಮೈಸೂರು



ರಾಧಕೃಷ್ಣ



ನಟರಾಜ ವಿಗ್ರಹ



ಅರ್ಧನಾರೀಶ್ವರ ಮೂರ್ತಿ



ನಾಗೇಂದ್ರಸ್ಥಪತಿಯವರ ಶಿಲ್ಪ ವೃಷಭ (ನಂದಿ)



ವೈಷ್ಣರು



ಪರಮೇಶ್ವರಾಚಾರ್, ಶಿವಶಂಕರಾಚಾರ್, ಸದಾನಂದಾಚಾರ್,
ಚೆನ್ನವೀರಪ್ಪ ಹಾಗೂ ನಾಗೇಂದ್ರ ಸ್ಥಪತಿಗಳು








ಶ್ರೀ ಚಾಮುಂಡೇಶ್ವರಿ



ದ್ವಾರ ಪಾಲಕ



ಕಾಮಕಾಮೇಶ್ವರಿ ದೇವಸ್ಥಾನದ ನಂದಿ ವಿಗ್ರದ ಕೆತ್ತನೆ ಕೆಲಸವು ಶ್ರೀ ನಾಗೇಂದ್ರ ಸ್ಥಪತಿಗಳ
ನೇತೃತ್ವದಲ್ಲಿ ನಡೆಯುತ್ತಿರುವುದು

ಗಂಟೆಯ ತಳವೇ ನಂದಿಯ ಪೀಠದ ಮುಂಭಾಗ. ಅದರಲ್ಲಿ ನಂದಿ ಮೂರ್ತಿಯನ್ನು ಕೆತ್ತಿದವರ ವಿವರವಿದೆ[1]. ಶ್ರೀ ಸಿದ್ಧಲಿಂಗ ಸ್ವಾಮಿನ ಪುತ್ರ ಶಿಲ್ಪಸಿದ್ಧಾಂತಿ ನಾಗೇಂದ್ರ ಸ್ಥಪತಿನ ನಿರ್ಮಿತಮಿದಂ ಬಿಂಬಂ ಶಾಲಿವಾಹನ ಶಕಾಬ್ದ : 1875. 1954ನೇ ಇಸವಿ. ಸಂಸ್ಕೃತದಲ್ಲಿರುವ ಈ ವಿವರದಿಂದ ಮಾತ್ರ ಕಾಮಕಾಮೇಶ್ವರಿ ದೇವಾಲಯದ ಅಸ್ತಿತ್ವ ತಿಳಿಯಬಹುದಾಗಿದೆ. ಇದನ್ನು ಕಟ್ಟಿಸಿದವರಾರು? ಪ್ರಮುಖ ಶಿಲ್ಪಿಗಳಾರು ಎಂಬ ಅಂಶವನ್ನು ಎಲ್ಲಿಯೂ ದಾಖಲಿಸಿಲ್ಲ.

ಅರ್ಧನಾರೀಶ್ವರ

ಬಹುತೇಕ ಎಲ್ಲಾ ಶಿಲ್ಪಿಗಳು ಅವರವರ ಮಾಧ್ಯಮವಾದ ಮರ, ಲೋಹ, ಶಿಲೆಗಳಲ್ಲಿ ಒಂದಲ್ಲಾ ಒಂದು ವಿಧದಲ್ಲಿ ಶಿಲ್ಪ ರಚಿಸಿರುತ್ತಾರೆ. ಸ್ತ್ರೀ ಮತ್ತು ಪುರುಷ ದೇಹಗಳ ಸಮ್ಮಿಶ್ರತೆಯನ್ನು ತೋರಿಸುವಲ್ಲಿ ಬಹಳಷ್ಟು ಜನ ವಿಫಲತೆಯನ್ನು ಹೊಂದಿರುತ್ತಾರೆ. ದೇಹದ ಎಲ್ಲಾ ಭಾಗಗಳನ್ನು ಸ್ತ್ರೀ ಪುರುಷರ ರೀತಿ ವಿಭಜಿಸಿ ರಚಿಸಬಹುದು. ಆದರೇ ಮುಖದಲ್ಲಿ ಮೂಡಿಸುವ ಕಳೆ ಮಾತ್ರ ಅನುಭವ ಪೂರ್ಣವಾದದ್ದು. ಬರೀ ಶಾಸ್ತ್ರಗ್ರಂಥ ಓದುವಿಕೆಯಿಂದಾಗಲೀ, ಅಥವಾ ಈ ಹಿಂದೆ ಮಾಡಿರುವ ಚಿತ್ರ, ಶಿಲ್ಪಗಳ ರೀತಿ ಅನುಕರಿಸುವುದರಿಂದಾಗಲೀ, ಬರಲಾರದು.

ನಾಗೇಂದ್ರ ಸ್ತಪತಿಗಳವರ ಕಲಾ ಕೌಶಲ್ಯದಿಂದ ಮೂಡಿದ ಶಿಲ್ಪ ಶಾಸ್ತ್ರ ಸಂಹಿತೆ ಮಾತ್ರವಲ್ಲ, ಶಿವ ಶಕ್ತಿಯರ ಮುಖ ಕಮಲಗಳಲ್ಲಿ ಲಿಂಗಭೇದ ಕಾಣಿಸುವಂತೆ ಇದ್ದರೂ, ಜಲ ಮತ್ತು ಹಾಲು ಸಮ ಪ್ರಮಾಣದಲ್ಲಿ ಬೆರೆತರೂ ಹಾಲಿನಂತೆಯೇ ಕಾಣುವ ಜಲದಂತೆ, ಮುಖದ ರಚನೆ ಮಾಡಿದ್ದಾರೆ. ಅರಿತು ನೋಡಿದಾಗ ಲಿಂಗ ಭೇದ ಕಾಣುತ್ತದೆ. ಮರೆತು

---

1. ಶ್ರೀ ಜಗದ್ಗುರು ನಾಗಲಿಂಗ ಸ್ವಾಮಿ ಪೀಠಾಚಾರ್ಯ ಶಿಲ್ಪ ಸಿದ್ಧಾಂತ

ನೋಡಿದಾಗ ಒಂದೇ ಚಿತ್ರದಂತೆ ಕಾಣುತ್ತದೆ.

ಬಲಭಾಗದಲ್ಲಿ ಶಿವ ಎಡಕ್ಕೆ ಶಿವೆ, ರೌದ್ರ ಮತ್ತು ಶಾಂತಿಗಳ ಸಮ್ಮಿಲನ ಮುಖದಲ್ಲಿ ಹಣೆಗಣ್ಣು ಶಿವನಿಗೆ, ಅದರರ್ಧವನ್ನು ಮಾತ್ರ ತೋರಿಸಿ ಉಳಿದರ್ದವನ್ನು ಪಾರ್ವತಿಯ ಮುಖಕೊಪ್ಪುವ ತಿಲಕದಂತೆ ರೂಪಿಸಿದ್ದಾರೆ. ಪರಮೇಶ್ವರ ಜಟಾಮುಕುಟ ಪಾರ್ವತಿಯ ಕೇಶಬಂಧ ಬಲ ಕರ್ಣದಲ್ಲಿ ಧರಿಸಿರುವ ಸರ್ಪಕುಂಡಲ, ಎಡಕ್ಕೆ ಧರಿಸಿರುವ ಕರ್ಣಾಭರಣಗಳು ಬೇರೆ ಬೇರೆ ಎನಿಸಿದರೂ, ತುಂಬಿದ ಗಲ್ಲ, ಪ್ರಸನ್ನತೆ ಸೂಸುವ ಕೆಂದುಟಿಗಳು, ಅದಕ್ಕೊಪ್ಪುವ ನಾಸಿಗಾಕ್ರ, ಪರಸ್ಪರ ಪೂರಕವಾಗಿ ಪ್ರೇರಕವಾಗಿವೆ.

ಶಿಲ್ಪದ ಬಲಭಾಗವಾದ ಶಿವನ ಮುಖ್ಯ ಲಕ್ಷಣಗಳಾದ ಶಕ್ತಿಯುತವಾದ ವಕ್ಷ ಸ್ಥಲ. ಸೊಂಟದ ಕೆಳಭಾಗಕ್ಕೆ ಅಂಟಿಕೊಂಡಂತಿರುವ ಹುಲಿಯ ಚರ್ಮ, ಮೊಣಕಾಲಿನ ಮೇಲೆ ಅರ್ಧಕ್ಕೆ ಹೊಂದಿಕೊಂಡಂತೆ ಇದ್ದರೇ, ಎಡಗಡೆಯು ಪಾರ್ವತಿಯ ಉನ್ನತವಾದ ಸ್ತನ, ಭುಜದಿಂದ ಪಾದದವರೆಗೂ ಮುಚ್ಚುವಂತಹ ಶ್ವೇತ ವಸ್ತ್ರ ಕಾಣಬಹುದು. ಬಲ ಪಾದವು ಸ್ವಲ್ಪ ಬಗ್ಗಿರುವಂತೆಯೂ ಎಡ ಪಾದವು ಸ್ಥಿರವಾಗಿರುವಂತೆಯೂ ಇದ್ದು, ಬಲಕ್ಕಿರುವ ಎರಡು ಕೈಗಳಲ್ಲಿ ಶೂಲ ಮತ್ತು ಇಳಿಬಿಟ್ಟ ಕೈ ಹಸ್ತ ಅದೋಮುಖವಾಗಿ ಅಭಯವನ್ನು ನೀಡುವಂತಿದ್ದರೇ ಎಡಕ್ಕೆ ಪಾರ್ವತಿಯ ಒಂದು ಕೈಯಲ್ಲಿ ಕಮಲವನ್ನು ಮತ್ತೊಂದರಲ್ಲಿ ವರದ ಹಸ್ತವನ್ನೊಂದಿದೆ. ಸರ್ವಾಂಗ ಸುಂದರವಾದ ಈ ಶಿವ ಶಿವೆಯರ, ಪ್ರಕೃತಿ, ಪುರುಷರ ಕೆತ್ತನೆಯ ಶಿಲ್ಪವೂ ನಯನ ಮನೋಹರವಾಗಿದೆ. ಇದನ್ನು ಕಾಮ ಕಾಮೇಶ್ವರಿ ದೇವಾಲಯದಲ್ಲಿ ಇಂದಿಗೂ ಕಾಣಬಹುದಾಗಿದೆ.

ನಟರಾಜ ವಿಗ್ರಹ


ನಟರಾಜ ನಾಟ್ಯ/ನೃತ್ಯದ ಸಂಕೇತ. ಶಿಲ್ಪ ಶಾಸ್ತ್ರಗಳು ನೃತ್ಯ

ಮೂರ್ತಿಯ ಹದಿನೆಂಟು ಬಗೆಗಳಲ್ಲಿರುವ ಲಕ್ಷಣಗಳನ್ನು ಹೇಳುತ್ತವೆ. ್ಥಪತಿಯವರ ಹಸ್ತದಿಂದ ನಿರ್ಮಿತವಾದ ನಟರಾಜ ಹಸನ್ಮುಖ ಾವವುಳ್ಳವನಾಗಿದ್ದಾನೆ. ಚತುರ ಬಾಹುಗಳನ್ನು ಹೊಂದಿದ್ದು ತ್ರಿಶೂಲ, ಮರುಗ ಪಿಡಿದು ನಾಟ್ಯಭಂಗಿಯಲ್ಲಿದ್ದಾನೆ. ಜಟೆಯು ಹರಡಿದೆ. ಒಂದು ಸ್ತ (ಬಲ) ಅಭಯುವನ್ನು ಮತ್ತೊಂದು ಅದೋಮುಖವಾಗಿ ಗ್ಗಿರುವುದನ್ನು ಕಾಣಬಹುದು. ಮೇಲಕ್ಕೆತ್ತಿದ ಎಡ ಕಾಲಿನ ಾದದಡಿಯಲ್ಲಿ, ಅಪಸ್ಮಾರನು ಪಿಡಿದಿರುವ ಹಾವಿನ ಹೆಡೆ ಇದೆ. ಪಸ್ಮಾರನು ಬಲಕ್ಕೆ ಮುಖ ಮಾಡಿದ್ದಾನೆ. ಎಡಗಡೆಗೆ ಕಾಲು ಾಚಿಕೊಂಡಿದೆ. ನಟರಾಜನ ಬಲ ಪಾದವು ಅಪಸ್ಮಾರನನ್ನು ಮೆಟ್ಟಿ ನಿಂತಿದೆ. ಟರಾಜನನ್ನು ಸುತ್ತುವರೆದಿರುವ ಪ್ರಭಾ ಮಂಡಲ ಮಕರ ವ್ಯಾಳಿಯಿಂದ ್ರಾರಂಭವಾಗುತ್ತದೆ. ಪ್ರಭಾ ಮಂಡಲ ಅಗ್ನಿ ಜ್ವಾಲೆಯ ಬದಲಾಗಿ ಹಾವಿನ ತ್ರವನ್ನು ಕೆತ್ತಿದ್ದಾರೆ. ಅದರ ಪಕ್ಕದಲ್ಲಿ ಹೂವಿನೆಲೆಗಳ ಗುಚ್ಚ ಹೀಗೆ ುತ್ತುವರೆದಿರುವ ಪ್ರಭಾಮಂಡಲದ ಅಗ್ರಭಾಗದಲ್ಲಿ ಕಿರೀಟಕ್ಕೆ ಂಟಿಕೊಂಡಂತೆ ಐದು ಹೆಡೆಗಳ ಸರ್ಪವು ಸುತ್ತಿಕೊಂಡು ಹೆಡೆ ಎತ್ತಿದಂತಿದೆ. ್ರನೇತ್ರ ದಾರಿಯಾದ ಶಿವನ ಮುಖ ಕಮಲವು ಆಕರ್ಷಣೀಯವಾಗಿದ್ದು ೈಸೂರಿನ ರಾಮಾನುಜ ರಸ್ತೆಯಲ್ಲಿರುವ ದೇವಾಲಯದಲ್ಲಿ ಾಣಬಹುದಾಗಿದೆ.

ೋಮಸ್ಕಂದ ಮೂರ್ತಿ

ಪಾರ್ವತಿ ಪರಮೇಶ್ವರರು ತಮ್ಮ ಪುತ್ರನೊಡಗೂಡಿ ಶಿಲಾ ರ್ವತದಲ್ಲಿ ಕುಳಿತಂತೆ ಇದೆ. ಪರಮೇಶ್ವರ ತುಸು ಪಾರ್ವತಿಯ ಕಡೆಗೆ ರುಗಿದಂತೆ ಇದ್ದು ಚತುರ ಬಾಹುಗಳನ್ನು ಹೊಂದಿದ್ದಾನೆ. ಬಲ ಬಾಹುವು ಭಯಹಸ್ತವನ್ನು ಎಡಬಾಹುವು ಪಾರ್ವತಿಯನ್ನು ಬಳಸಿದಂತೆಯೂ ಇದೆ. ಳಿದೆರಡು ಕೈಗಳಲ್ಲಿ ಪಾಶಾಂಕುಶಗಳಿದ್ದು ಸುಖಾಸೀನ ಮುದ್ರೆಯಲ್ಲಿ

ಜಟಾಮುಕುಟದಾರಿಯಾಗಿ ಕುಳಿತಿದ್ದಾನೆ. ಎಡಕ್ಕೆ ಪಾರ್ವತಿದೇವಿಯು ದ್ವಿ ಬಾಹುಗಳನ್ನು ಹೊಂದಿ ಬಲ ಬಾಹು ಪರಮೇಶ್ವರನತ್ತ ಇದ್ದರೇ ಎಡಹಸ್ತವು ತೊಡೆಯ ಮೇಲೆ ವಿಶ್ರಮಿಸಿದಂತಿದೆ. ಈರ್ವರ ಮದ್ಯೆ ಬಾಲಸ್ಕಂದನು ನಿಂತಿದ್ದಾನೆ. ಪಾದದಡಿಯಲ್ಲಿ ಅರಳಿದ ಪದ್ಮ ಕಮಲವಿದೆ. ದುಂಡಾದ ಮುಖವು ನಸುನಗೆಯಿಂದ ತಾಯಿ ಪಾರ್ವತಿಯತ್ತ ಗಮನ ಹರಿಸಿದಂತಿದೆ. ಪಾರ್ವತಿ ಪರಮೇಶ್ವರರ ಪಾದದಡಿಯಲ್ಲಿ ನಂದಿಯ ವಿಗ್ರಹವಿದೆ.



ಕನ್ನಿಕಾ ಪರಮೇಶ್ವರಿ

ಇದೊಂದು ಅಮೃತ ಶಿಲಾ ವಿಗ್ರಹ. ನಾಲ್ಕು ಅಡಿ ಎತ್ತರದ ಸ್ಥಾನಿಕ

ನಿಂತಿರುವ) ಮೂರ್ತಿ. ಮುಖದಲ್ಲಿ ಮಂದಸ್ಮಿತ ಕಳೆ ಸಕಲಾಭರಣ ಭೂಷಿತೆ. ಚ್ಚೆಯಂತಿರುವ ಉಡುಗೆಯ ಮೇಲೆ ಕೆತ್ತಿರುವ ಆಭರಣಗಳು ನಡುವಿನ ಡ್ಯಾಣದಿಂದ ಇಳಿಬಿದ್ದ ನೆರಿಗೆಗಳು ಗೊಂಚಲು ಗೊಂಚಲಿನಂತೆ ಕಾಣುತ್ತವೆ. ಾಲ್ಕು ಬಾಹುಗಳಲ್ಲಿ ಎರಡು ಹಸ್ತಗಳಲ್ಲಿ ಕಮಲವನ್ನು ಹೊಂದಿದ್ದು ಡಗೈನಲ್ಲಿರುವ ಕಮಲದ ಮೇಲೆ ಶುಕ (ಗಿಳಿ) ವೊಂದು ಕುಳಿತಂತಿದೆ. ಉಳಿದಂತೆ ಅಭಯ ಮತ್ತು ವರದ ಹಸ್ತವನ್ನು ಹೊಂದಿದೆ. ಪದ್ಮ ಪೀಠ ಮತ್ತು ಪ್ರಭಾವಳಿ ಕುಶಲ ಕೆಲಸದಿಂದ ಕೂಡಿದೆ.

ದಂಡಾಯುದ ಪಾಣಿ

ದಂಡಾಯುದ ಪಾಣಿ ಹೆಸರೇ ಹೇಳುವಂತೆ ದಂಡವನ್ನು ಹಿಡಿದು ನಿಂತಿರುವ ಬಾಲಕನ ಮುಖವುಳ್ಳ ವಿಗ್ರಹ. ದ್ವಿಬಾಹುಗಳು, ಂಹಲರಾಟವಿರುವ ಪ್ರಭಾವಳಿ, ವಿವಸ್ತ್ರನಾಗಿರುವ ಬಾಲಕ ಸುಬ್ರಹ್ಮಣ್ಯನು ಆಭರಣ ಯುಕ್ತನಾಗಿದ್ದಾನೆ. ನಡುವಿನ ಮೇಲೆ ಕೈ ಇಟ್ಟುಕೊಂಡು ನಿಂತಿದ್ದಾನೆ. ತಲೆಯಲ್ಲಿ ಕರಂಡ ಮುಕುಟ, ಕಿವಿಗಳಲ್ಲಿ ನಕ್ರ ಕುಂಡಲ, ವಕ್ಷ ಸ್ಥಳದಲ್ಲಿ ಛನ್ನವೀರ, ಕೈ ಕಾಲುಗಳಲ್ಲಿ ಕಡಗ, ಸೊಂಟದಲ್ಲಿ ಕಟೀ ಸೂತ್ರ ಧರಿಸಿರುವ ಸುಂದರ ವಿಗ್ರಹ ಬೆಂಗಳೂರಿನ ಭವ್ಯದೇಗುಲವೊಂದರಲ್ಲಿದೆ.

ಸತ್ಯನಾರಾಯಣ

ಸುಮಾರು ಐದಡಿ ಎತ್ತರವಿರುವ ಸ್ಥಾನಿಕ (ನಿಂತಿರುವ) ವಿಗ್ರಹ. ಶಂಖ, ಚಕ್ರ ಗದಾದಾರಿಯಾದ ವಿಷ್ಣುವಿನ ಮತ್ತೊಂದು ಕೈನಲ್ಲಿ ಕಮಂಡಲವಿದೆ. ಈ ಮೂರ್ತಿಯ ಮುಖವು ಉಳಿದೆಲ್ಲಾ ಮೂರ್ತಿಯ ಮುಖಗಳಿಗಿಂತ ತುಸು ಭಿನ್ನವಾಗಿದೆ. ನೀಳವಾದ ಮುಖ, ಅದಕ್ಕೆ ಒಂದುವರೆ ಪಟ್ಟು ಎತ್ತರವಾದ ಕಿರೀಟ, ಶಾಂತ ಭಾವ, ಶಿರಸ್ಸಿನ ಹಿಂಬದಿಯಲ್ಲಿ ಪ್ರಜ್ವಲಿಸುವ ಚಕ್ರ, ಕೊರಳಲ್ಲಿ ಕಂಠಾಭರಣ, ಎದ್ದು ಕಾಣುವಂತಹ ಯಜ್ಞೋಪವೀತ, ಎರಡು

ಭುಜಗಳನ್ನು ಬಳಸಿ ಇಳಿಬಿಟ್ಟಿರುವ ವಸ್ತ್ರ, ಸೊಗಸಾದ ಜರೀ ಅಂಚಿನ ಕಚ್ಚೆ ಪಂಚೆ, ನಡುವಿನ ತುಂಬಾ ಆಭರಣಗಳ ನಡುಪಟ್ಟಿ. ಜೋಡಿಸಿ ನಿಂತಂತಿರುವ ಪಾದಗಳು. ಮೂರ್ತಿಯ ಹಿನ್ನೆಲೆಗೆ ಅಂಟಿಕೊಂಡಂತಿರುವ ಪ್ರಭಾವಳಿಯ ಅಗ್ರಭಾಗ. ಎತ್ತರವಾದ ಸಿಂಹಲಲಾಟದಿಂದ ಕೂಡಿದ ಆಕರ್ಷಕ ವಿಗ್ರಹ, ಆಂದ್ರ ಪ್ರದೇಶದ ಪಾಮುಡಿ ಎಂಬಲ್ಲಿದೆ.

ಸೂರ್ಯದೇವ

ಮೈಸೂರಿನ ಕಾಮ ಕಾಮೇಶ್ವರಿ ದೇವಾಲಯದಲ್ಲಿರುವ ವಿಗ್ರಹ ಪರ್ಯಂಕಾಸನ ಮುದ್ರೆಯಲ್ಲಿ ಪದ್ಮ ಕಮಲಗಳ ಮೇಲೆ ಕುಳಿತಿದ್ದು. ತನ್ನ ಎರಡು ಕೈಯಲ್ಲಿ ಸಹ ಪದ್ಮ ಕಮಲವುಳ್ಳ ಬಳ್ಳಿ ಹಿಡಿದಂತಿದೆ. ಉನ್ನತವಾದ ಬಾಹು ಭುಜಗಳನ್ನು ಹೊಂದಿ ಕಿರೀಟದಾರಿಯಾಗಿರುವ ಸೂರ್ಯನ ಶಿರಸ್ಸಿನ ಹಿಂದೆ ಚಕ್ರಾಕಾರದ ಪ್ರಭಾವಲಯವಿದೆ. ಹಿನ್ನೆಲೆಯ ಪ್ರಭಾವಳಿ ವೃತ್ತಾಕಾರವಾಗಿದ್ದು ಅಗ್ನಿಯ ಪ್ರಭೆ ಅರ್ಥಾತ್ ಉರಿಯಂತೆ ಚಿತ್ರಿತವಾಗಿದೆ. ಪ್ರಭಾವಳಿಯ ಮೇಲ್ಭಾಗ ಸಿಂಹ ಲಲಾಟವು ಹೂ ಬಳ್ಳಿಗಳಿಂದ ಆವೃತವಾಗಿ ಪ್ರಭಾವಳಿಯ ಶಿರೋಭಾಗಕ್ಕೆ ಮತ್ತಷ್ಟು ಶೋಭೆ ತರುತ್ತವೆ.

ಸಂತ ಕನಕದಾಸ

ನಾಗೇಂದ್ರ ಸ್ತಪತಿಯವರ ಮತ್ತೊಂದು ಅಮೃತ ಶಿಲಾವಿಗ್ರಹ ಸಂತ ಕನಕದಾಸ. ಐದಡಿ ಎತ್ತರವಿರುವ ಈ ಮೂರ್ತಿಯನ್ನು ಉಡುಪಿಯ ಪ್ರಸಿದ್ಧವಾದ ಕೃಷ್ಣದೇವಾಲಯದ ಆವರಣದಲ್ಲಿ, ಕರ್ನಾಟಕದ ಮಾಜಿ ರಾಜ್ಯಪಾಲರು ಮತ್ತು ಆಗಿನ ರಾಷ್ಟ್ರಪತಿಗಳು ಆದ ವರಾಹ ವೆಂಕಟಗಿರಿಯವರು ಉದ್ಘಾಟಿಸಿದ್ದಾರೆ.


ಲಿಂಗೋದ್ಭವ ಮೂರ್ತಿಗಳು

ಧರ್ಮ ಸಂಸ್ಥಾಪನೆಗೆಂದು ಅವತರಿಸಿದ ಲಿಂಗೋದ್ಭವ ಮೂರ್ತಿಗಳ ಚಿತ್ರ ಕಲ್ಪನೆಯು ಶ್ರೀ ಸಿದ್ಧಲಿಂಗ ಸ್ವಾಮಿಗಳವರಿಂದ 1941ರಲ್ಲಿ ಪ್ರಥಮವಾಗಿ ಮೂಡಿ ಬಂದುದರ ಹಿನ್ನೆಲೆಯಲ್ಲಿ, ಭಾರತದಲ್ಲಿರುವ ಪಂಚ ಪೀಠಗಳಾದ, ಕಾಶೀ, ಕೇದಾರ, ಉಜ್ಜಯನಿ, ರಂಭಾಪುರಿ, ಶ್ರೀಶೈಲ ಅಲ್ಲದೇ ರಾಜ್ಯದ ಇತರ ಭಾಗಗಳಿಗೆ ಲಿಂಗೋದ್ಭವ ಮೂರ್ತಿ ಮಾಡಿಕೊಟ್ಟಿದ್ದಾರೆ. ಸ್ವಾಮಿಗಳವರ ಕಾಲದಲ್ಲಿ ಹಾಗೂ ನಂತರದ ಸ್ಥಪತಿಯವರಿಂದ ಹಲವಾರು ವಿಗ್ರಹಗಳು ರಚಿತಗೊಂಡಿವೆ. ಪ್ರಾಯಶಃ ಕರ್ನಾಟಕದಲ್ಲಿ ಸ್ಥಾಪಿತಗೊಂಡಿರುವ ಲಿಂಗೋದ್ಭವ ಮೂರ್ತಿಗಳೆಲ್ಲಾ, ಮೈಸೂರಿನಿಂದಲೇ ಆದವುಗಳು ಎಂದರೇ ತಪ್ಪಾಗಲಿಕ್ಕಿಲ್ಲ. ಅದರಲ್ಲಿ ಮುಖ್ಯವಾಗಿ ನವಲೀಲಾ ಸಹಿತವಾದ ಲಿಂಗೋದ್ಭವ ಮೂರ್ತಿಗಳನ್ನು ಗೋಕರ್ಣ ಕ್ಷೇತ್ರ ಮತ್ತು ಬಾಳೆಹೊನ್ನೂರು ಮಠಗಳಲ್ಲಿ ಕಾಣಬಹುದಾಗಿದೆ. ಹಾಗಯೇ ಗದುಗಿಗೆ ಪಂಚಲಿಂಗೋದ್ಭವ ಮೂರ್ತಿಗಳನ್ನು ಮಾಡಿಕೊಟ್ಟಿದ್ದಾರೆ. ಇವುಗಳ ವಿಶೇಷವೆಂದರೇ ಪಂಚಚಾರ್ಯರನ್ನು ಕುರಿತ ಈ ಲಿಂಗೋದ್ಭವ ಮೂರ್ತಿಗಳು ಯಜ್ಞೋಪವೀತದಾರಿಗಳಾಗಿದ್ದು ಲಿಂಗ ಬ್ರಾಹ್ಮಣ ಸಂಪ್ರದಾಯಸ್ಥರೆಂಬ ವಾದಕ್ಕೆ ಪುಷ್ಠಿ ಕೊಡುವಂತೆ ಶಿಲ್ಪ ಕೆತ್ತನೆಗಳಾಗಿವೆ. (ರೇಣುಕ, ಏಕೋರಾಮ, ಮರುಳಾರಾಧ್ಯ, ಪಂಡಿತಾರಾಧ್ಯ, ವಿಶ್ವರಾಧ್ಯ)

ಸುಬ್ರಮಣ್ಯ

ಬೆಂಗಳೂರಿನ ಸುಬ್ರಮಣ್ಯಪುರಕ್ಕೆ ಮಾಡಿಕೊಟ್ಟಿರುವ (1953) ಈ ವಿಗ್ರಹದ ವಿಶೇಷ, ಬಾಲಕ ಸುಬ್ರಹ್ಮಣ್ಯ ತನ್ನ ವಾಹನವಾದ ನವಿಲನ್ನು ತನ್ನ ಎಡ ಬಾಹುವಿನಿಂದ ಅದರ ಕೊರಳ ಬಳಸಿ ಪಿಡಿದಿದ್ದಾನೆ. ಬಲ ಬಾಹುವು ಅಭಯಹಸ್ತವೊಂದಿದೆ. ನಿಂತಿರುವ ಈ ಮೂರ್ತಿಯ ಪಾದದ ಬಳಿಯಲ್ಲಿ

ಹಾವೊಂದು ಎಡೆ ಎತ್ತಿ ನಿಂತಿದೆ. ನವಿಲಿನ ರೆಕ್ಕೆ ಮತ್ತು ಗರಿಗಳ ಕೆತ್ತನೆಯ ಕಲಾ ವಿನ್ಯಾಸವು ನೈಜತೆಯ ನಿಜರೂಪದಂತಿದೆ. ಈ ಸ್ಥಾನಿಕ ಮೂರ್ತಿಯ ಹಿನ್ನೆಲೆಯ ಪ್ರಭಾವಳಿ ಅಲಕರಣಯುಕ್ತವಾದ ಕುಶಲ ಕೆಲಸದಿಂದ ಕೂಡಿದೆ.



ರಾಧಾಕೃಷ್ಣ

ಬೆಂಗಳೂರಿನ ರಾಜಾಜಿನಗರದ ದೇವಾಲಯವೊಂದಕ್ಕೆ ಮಾಡಿಕೊಟ್ಟಿರುವ ಈ ಶಿಲ್ಪ ಪ್ರಭಾವಳಿ ರಹಿತವಾಗಿದ್ದು, ಕೊಳಲನ್ನೂದುತ್ತಿರುವ ಕೃಷ್ಣ, ರಾಧಾ ಸಹಿತವಾಗಿ ನಿಂತಿದ್ದಾನೆ. ತ್ರಿಭಂಗ ಲಕ್ಷಣದಲ್ಲಿರುವ ಕೃಷ್ಣನ ಕಿರೀಟ, ಕೊರಳಹಾರ, ಧರಿಸಿದ ಕಚ್ಚೆ ಪಂಚೆಯಂಚುಗಳು ನಡುವಿನ ಮೇಲಿನ ಆಭರಣ ಆಕರ್ಷಕ ಕಲ್ಕೆತ್ತನೆಯಾಗಿದ್ದು ಭುಜವನ್ನು ಬಳಸಿ ಬಂದ ವಸ್ತ್ರವು ಮಂಡಿಯವರೆಗೆ ಚಾಚಿದ್ದು, ವಿಗ್ರಹಕ್ಕೆ ಉತ್ತಮ ಹಿನ್ನೆಲೆ ಒದಗಿಸಿದಂತಿದೆ. ಹಾಗಯೇ ರಾಧೆಯ

ಬಲಬಾಹುವು ಕೃಷ್ಣನ ಭುಜವನ್ನು ಬಳಸಿದಂತಿದ್ದು ಎಡ ಬಾಹುವಿನ ಹಸ್ತದಲ್ಲಿ ಕಮಲವನ್ನು ಪಿಡಿದಿರುವುದನ್ನು ಕಾಣಬಹುದಾಗಿದೆ.

ಶಿಲ್ಪಗಳು

ಸ್ಥಪತಿಯವರ ಶಿಲ್ಪಗಳು ಬಹುತೇಕ ಅಚಲವಾದವು. ಚಲವಿಗ್ರಹಗಳೆಂದರೇ ಚಲಿಸುವ ಅಥವಾ ಮೆರೆಯುವ ವಿಗ್ರಹಗಳು. ಇವುಗಳ ಸಂಖ್ಯೆ ತೀರ ಕಡಿಮೆ. ಲೋಹಗಳ ವಿಗ್ರಹಗಳಿಗಿಂತ ಶಿಲಾವಿಗ್ರಹಗಳೇ ಅಧಿಕ ಸಂಖ್ಯೆಯಲ್ಲಿ ಬೇಡಿಕೆಯಾದುದರಿಂದ ಗ್ರಾಹಕರ ಅಭಿರುಚಿಗನುಗುಣವಾಗಿ ಶಿಲಾ ಕೆತ್ತನೆಯನ್ನು ಮಾಡಿದ್ದಾರೆ.

ಭಿತ್ತಿಶಿಲ್ಪ

ಒಂದು ಸಾವಿರದ ಒಂಬೈನೂರ ಅರವತ್ತರ ಸುಮಾರಿನಲ್ಲಿ ರಾಮಾಯಣ, ಮಹಾಭಾರತದ ಸನ್ನಿವೇಶಗಳನ್ನು ಕುರಿತ ಭಿತ್ತಿ ಶಿಲ್ಪಗಳನ್ನು ಮಾಡುವ ಕೆಲಸವೊದಗಿತು. ಭಿತ್ತಿಶಿಲ್ಪ ಸ್ಥಪತಿಯವರನ್ನು ಸಂಪರ್ಕಿಸಿದ ಗುರುವಾಯೂರು ದೇವಸ್ಥಾನದ ಮುಖ್ಯಸ್ಥರು. ಅವರ ಚಿತ್ರ ಶಿಲ್ಪಗಳನ್ನು ನೋಡಿ, ಅವರ ಹಿನ್ನೆಲೆಯನ್ನು ತಿಳಿದು, ನಮ್ಮ ದೇವಾಲಯಕ್ಕೆ ಅಗತ್ಯವಾದ ಎಲ್ಲಾ ಮೂರ್ತಿಗಳು ತಮ್ಮಿಂದಲೇ ಆಗಬೇಕೆಂದು ಪಟ್ಟುಹಿಡಿದರು. ಆಗ್ಗೆ ಸ್ಥಪತಿಯವರಲ್ಲಿ ಕೈ ತುಂಬಾ ಕೆಲಸ. ಅವರಿಗೆ ಬಿಡುವೆಂಬುದೇ ಇಲ್ಲ. ಇವರಿಗಾದರೋ ಆ ಕಥಾ ಸನ್ನಿವೇಶಗಳನ್ನು ಸ್ಥಪತಿಯವರೇ ಬರೆದುಕೊಟ್ಟು ಅವುಗಳು ದೇವಾಲಯ ಸಮಿತಿಯಲ್ಲಿ ಒಪ್ಪಿಗೆಯಾದ ನಂತರ ಅವುಗಳ ಭಿತ್ತಿ ಶಿಲ್ಪ ರಚಿಸಬೇಕು. ಸುಧೀರ್ಘ ಸಮಯವಿಡಿಯುವ ಈ ಕೆಲಸದ ಬಗ್ಗೆ ಸ್ಥಪತಿಯವರು ತುಂಬಾ ತಲೆಕೆಡಿಸಿಕೊಂಡಿದ್ದರು.

ಸುಮಾರು ಎರಡಡಿ ಎತ್ತರ, ಮೂರಡಿ ಅಗಲವಿರುವ ಭಿತ್ತಿಶಿಲ್ಪಗಳನ್ನು

ಪ್ರತ್ಯೇಕ ಪ್ರತ್ಯೇಕವಾಗಿ ಮಾಡಬೇಕು. ಹಿಂಬದಿ ಸಮತಟ್ಟಾಗಿಯೂ, ಹಾಗೆಯೇ ಗೋಡೆಯೊಳಗೆ ಕೂರಿಸಲನುಕೂಲವಾಗುವಂತೆ ನಾಲ್ಕು ಹೊರ ಮೈಗಳನ್ನು ಸಮತಟ್ಟಾಗಿಸಿ ಮುಂಬದಿಯಲ್ಲಿ ಚಿತ್ರ ಕೆತ್ತನೆಯಾಗಬೇಕು.

ಪೂಜಾ ಮೂರ್ತಿಗಳಂತೆ ಪತ್ನಿ ಸಹಿತವಾದ ಅಥವಾ ಏಕಾಂಗಿಯಾದ ಬಿಡಿ ಬಿಡಿಯಾದ ಶಿಲ್ಪವಾಗಿರುವುದಿಲ್ಲ. ಕಥಾಸನ್ನಿವೇಶಕ್ಕನುಗುಣವಾದ ಹಲವಾರು ಪಾತ್ರಗಳನ್ನು, ಸನ್ನಿವೇಶಗಳನ್ನು ಒಂದೊಂದು ಭಿತ್ತಿಯಲ್ಲಿಯೂ ತರಬೇಕು. ನಿಖರವಾದ ಉದ್ದಗಲಗಳಲ್ಲಿ ಸಾಂದರ್ಭಿಕ ಕಥಾ ಚಿತ್ರಗಳ ಕೆತ್ತನೆ ಅಷ್ಟು ಸುಲಭದಲ್ಲಿ ಪಾತ್ರಗಳು ಮೇಲಿಂದ ಮೇಲೆ ಧಾರವಾಹಿಯಂತೆ ಬರುವುದರಿಂದ ಮೊದಲು ಕೆತ್ತಿದ ಶಿಲ್ಪದಲ್ಲಿ ಮೂಡುವ ಮುಖ ಚರ್ಯೆಯನ್ನೇ ಇನ್ನುಳಿದ ಭಿತ್ತಿ ಶಿಲ್ಪಗಳಲ್ಲಿಯೂ ಕಾಣಿಸಬೇಕು.

ಚಿತ್ರರಚನೆಯಲ್ಲಾದರೇ, ನಾವು ಬೇಕೆನಿಸಿದಂತೆ ಆ ಪಾತ್ರಗಳನ್ನು ಚಿತ್ರಿಸಬಹುದು. ಒಂದು ವೇಳೆ ಮುಖದ ಹೋಲಿಕೆ ಮೊದಲ ಕಲಾಕೃತಿಯಂತೆ ಬರದೆ ಹೋದರೇ ಅದರ ಮೇಲೆ ಬಣ್ಣ ಬಳಿದು ಮತ್ತೊಮ್ಮೆ ಪ್ರಯತ್ನಿಸಿ ಹಿಂದಿನ ಚಿತ್ರದ ಮುಖದ ಹೋಲಿಕೆಯಂತೆ ತರಲು ಪ್ರಯತ್ನಿಸಬಹುದು. ಯಶಸ್ವಿಯೂ ಆಗಬಹುದು. ಆದರೇ ಭಿತ್ತಿಶಿಲ್ಪದಲ್ಲಿ ಹಾಗೆ ಮಾಡಲು ಸಾಧ್ಯವೇ ಇಲ್ಲ.

ಹೋಲಿಕೆ ಮುಖವನ್ನು ದುಂಡಾಗಿಯೋ, ನೀಳವಾಗಿಯೋ ಕೆತ್ತಿದ ಮೇಲೆ ಅದನ್ನು ಪರಿವರ್ತಿಸಲು ಸಾದ್ಯವೇ ಇಲ್ಲ. ದುಂಡಾಗಿರುವ ಮುಖವರ್ಣಿಕೆಯನ್ನು ನೀಳವನ್ನಾಗಿಸಲು, ಅಥವಾ ನೀಳವಾಗಿರುವುದನ್ನು ದುಂಡಾಗಿ ರಚಿಸಲು ಅಲ್ಲಿ ಸ್ಥಳವೇ ಇರುವುದಿಲ್ಲ. ಸೀಮಿತವಾದ ಆ ವ್ಯಾಪ್ತಿಯೊಳಗೆ ಮುಖ್ಯ ಅವಯವಗಳಾದ ಕಣ್ಣು, ಮೂಗು, ಬಾಯಿ, ಅದಕ್ಕೊಪ್ಪುವ ಹಣೆ ಇವುಗಳಲ್ಲಿ ತುಸು ವ್ಯತ್ಯಾಸವಾದರೂ ಆ ಶಿಲ್ಪದಲ್ಲಿ ಬರುವ ಮುಖ ಹೋಲಿಕೆಯಂತೆ ತೋರದಂತಾಗುತ್ತದೆ.

ತುಸು ವ್ಯತ್ಯಾಸಗೊಂಡ ಆ ಶಿಲ್ಪದಲ್ಲಿ ಶಿಲ್ಪಿಯಾದವನು ಏನೆಲ್ಲಾ ಬುದ್ಧಿ ಖರ್ಚುಮಾಡಿ ವಿವರಣೆ ನೀಡಿದರೂ, ಕ್ರಯಿಸುವ ಗ್ರಾಹಕ ಮತ್ತು ನೋಡುವ ವೀಕ್ಷಕ ಮಾತ್ರ ಒಪ್ಪಲಾರ. ಭಾವಚಿತ್ರ ರಚಿಸಲು ಕೊಟ್ಟಂತಹ ಸಂದರ್ಭದಲ್ಲಿಯೇ ಗ್ರಾಹಕರನ್ನು ಸಂತೃಪ್ತಿಗೊಳಿಸುವುದು ಕಷ್ಟವೆನಿಸುತ್ತದೆ. ಈ ಚಿತ್ರ ನಾನು ಕೊಟ್ಟಂತಹ ಚಿತ್ರದಂತಿಲ್ಲ ಇದು ಬೇರೆಯದೇ ಆಗಿದೆಯೆಂದು ತಿರಸ್ಕರಿಸುವ ಅನೇಕ ಸನ್ನಿವೇಶಗಳನ್ನು ಕಾಣುತ್ತೇವೆ. ಅತ್ಯಂತ ಮುಂದುವರೆದಿರುವ ಛಾಯಾಗ್ರಹಣದಲ್ಲಿ ಸಹ ಕಿರುಚಿತ್ರವನ್ನು ದೊಡ್ಡ ಪ್ರಮಾಣದಲ್ಲಿ (Enlarge) ವಿಸ್ತರಣೆ ಗೊಳಿಸಿದಾಗ ಸಹ ಇದು ನಾನು ಕೊಟ್ಟ ಚಿತ್ರದಂತಿಲ್ಲವೆಂದು ತಿರಸ್ಕರಿಸುವುದನ್ನು ಕಾಣುತ್ತೇವೆ. ಛಾಯಾಗ್ರಹಣದಲ್ಲಿ ಕಲಾವಿದನ ಪಾತ್ರ ಕಡಿಮೆ, ಕಿರಿದಾದದ್ದನ್ನು ಹಿರಿದಾಗಿ ಮುದ್ರಿಸುವುದು ಮಾತ್ರ. ಆದರೇ ಗ್ರಾಹಕನಿಗೆ ಕಿರುಪ್ರಮಾಣದ ಚಿತ್ರದಲ್ಲಿರುವ ದೋಶವೇ ಕಂಡು ಬರುವುದಿಲ್ಲವಾಗಿ, ತಾನು ನೋಡಿದ ರೂಪವೇ ಕಣ್ಣಿಗೆ ಕಟ್ಟಿದಂತಿರುವುದರಿಂದ ಸುಲಭ ಸಾಧ್ಯವಾಗಿ ಒಪ್ಪುವುದಿಲ್ಲ.

ಇಂತಹ ಕಠಿಣ ಪರಿಶ್ರಮದ ಮುಖ ಚಿತ್ರರಚನೆ, ಶಿಲ್ಪದಲ್ಲಿ ಧಾರವಾಹಿಯಂತೆ ಬರುವ ಪಾತ್ರಗಳಲ್ಲಿ ತೋರಿಸುವುದು ಎಷ್ಟು ಸುಲಭವೆಂಬುದನ್ನು ಓದುಗರೇ ಅರ್ಥ ಮಾಡಿಕೊಳ್ಳಬೇಕು.

ಸ್ತಪತಿಯವರ ಚಿತ್ರಕಲಾನುಭವ, ಕೆತ್ತನೆಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳಲು ಶಕ್ಯವಾಯಿತು. ಅವರ ತಾಳ್ಮೆ, ಹಿಡಿದ ಕೆಲಸದಲ್ಲಿ ಶ್ರದ್ಧೆ ತಾವೇ ಸ್ವತಃ ನಿಂತು ಕೆಲಸ ಮಾಡುವ ಕಾರ್ಯದುತ್ಸಾಹ ಇವೆಲ್ಲದರ ಸಂಗಮವಾಗಿ ಸರ್ವಾಂಗ ಸುಂದರವಾದ ಭಿತ್ತಿಶಿಲ್ಪಗಳು ರಚಿತಗೊಂಡವು ಅವುಗಳಿಂದ ಸ್ತಪತಿಯವರಿಗೆ ಆರ್ಥಿಕ ಲಾಭವಾಗದಿದ್ದರೂ, ರಾಜ್ಯಕ್ಕೆ ಅದರಲ್ಲೂ ಮೈಸೂರಿನ ಶಿಲ್ಪ ಸಂಕುಲಕ್ಕೆ ಖ್ಯಾತಿಯನ್ನು ತರುವಂತಾಯಿತು. ರಾಜ್ಯದ ಹೊರಗಿನ ಜನ ಮೈಸೂರಿನತ್ತ ನೋಡಲು ನಾಂದಿಯಾಯಿತು. ಈ ಭಿತ್ತಿ ಶಿಲ್ಪಗಳು ಸ್ತಪತಿಯವರ ಸಾಧನೆಯ ಮೈಲುಗಲ್ಲುಗಳಲ್ಲಿ ಒಂದಾಗಿದೆ.



ವ್ಯಕ್ತಿ ಶಿಲ್ಪ

ಭಿತ್ತಿ ಶಿಲ್ಪಗಳ ರಚನಾ ಸಂದರ್ಭದಲ್ಲಿಯೇ ಸ್ತಪತಿಯವರಿಗೆ ಅಮೃತ ಶಿಲೆಯ ಪೂರ್ಣ ಪ್ರಮಾಣದ ಮೂರ್ತಿ ರಚನೆಯ ತುರ್ತು ಕೆಲಸವೊದಗಿತು. ಈ ಲೇಖಕನಾದ ನಾನು ಅಂದು ಅವರ ವಿದ್ಯಾರ್ಥಿ. 1969ರಲ್ಲಿ ಸ್ಥಾಪನೆಗೊಂಡ ಎಂ. ವೆಂಕಟ ಕೃಷ್ಣಯ್ಯನವರ ಅಮೃತ ಶಿಲಾಶಿಲ್ಪದ ರಚನೆ ಸುಧೀರ್ಘ ಸಮಯವನ್ನೇನೋ ಹಿಡಿಯಿತು. ಭಾವಚಿತ್ರ ರಚನೆಯೇ ಶ್ರಮದಾಯಿಕವಾದದೆಂದೂ ಭಿತ್ತಿಶಿಲ್ಪದ ವಿವರದಲ್ಲಿ ತಿಳಿಸಿರುವೆ.

ಆದರೇ ಭಾವಚಿತ್ರದ ಶಿಲ್ಪ ರಚನೆ ಅದರಲ್ಲೂ ಅಮೃತ ಶಿಲೆಯಂತಹ ಗಟ್ಟಿ ಕಲ್ಲಿನಲ್ಲಿ ಮಾಡುವುದು ಸುಲಭದ ಮಾತಲ್ಲ. ಕಠಿಣ ಪರಿಶ್ರಮದಿಂದ ಮಾತ್ರ ಸಾಧ್ಯ. ನಾಲ್ಕೈದು ವರ್ಷಗಳ ಕಾಲ ನಡೆದ ಈ ಕೆತ್ತನೆ ಕಾರ್ಯದಲ್ಲಿ ಅನುಭವಿಸಿದ ತೊಡಕುಗಳು ಅಪಾರ. ಮೆದುಕಲ್ಲಿನಂತೆ ದುಡಿಸಿಕೊಳ್ಳಲು ಶಕ್ಯವಿಲ್ಲ. ಕೃಷ್ಣಶಿಲೆಯಲ್ಲಿ ಒಂದು ದಿನಕ್ಕೆ ಮಾಡಬಹುದಾದಷ್ಟು ಕೆಲಸವನ್ನು ಕನಿಷ್ಟ ಎರಡು ಮೂರು ದಿನಗಳಾದರೂ ಮಾಡಬೇಕಾಗುತ್ತದೆ. ಅದರಲ್ಲಿಯೂ ಕಿರೀಟ, ಆಭರಣದಂತಹ ಕುಶರೀ ಕೆಲಸವನ್ನು ಮಾಡುವಾಗಲಂತೂ ಸಮಯದ ಲೆಕ್ಕಚಾರ ಹಾಕಲು ಸಾಧ್ಯವೇ ಆಗುವುದಿಲ್ಲ.

ಅವಸರಕ್ಕಂತೂ ಅವಕಾಶವೇ ಇಲ್ಲ. ವಿದ್ಯಾರ್ಥಿ ದೆಸೆಯಲ್ಲಿದ್ದ ನಮಗೆ ಆ ಅಮೃತಾ ಶಿಲಾ ಮೂರ್ತಿಯನ್ನು ನಯ ಮಾಡುವುದೇ ದೊಡ್ಡ ಕೆಲಸವಾಗಿತ್ತು. ಅದರಲ್ಲಿಯೂ ಮುಖದ ಹೊಳಹು, ಆಕಾರಕ್ಕನುಗುಣವಾಗಿ ಉಜ್ಜುಗೊರಡುಗಳಿಂದ ಕಿಂಚಿತ್ತೂ ಭಂಗ ಬರದಂತೆ ನಯಗೊಳಿಸುವುದು ಒಂದು ಕಲೆಗಾರಿಕೆಯೇ ಸರಿ. ನೋಡುವುದಕ್ಕೆ ಸಣ್ಣ ಕೆಲಸವೆಂದೆನಿಸಿದರೂ, ತಾಳ್ಮೆ ಮತ್ತು ಶ್ರಮ ಅತ್ಯಗತ್ಯವೆಂಬುದನ್ನು ಯಾರು ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ.

ಈ ಶಿಲಾ ಮೂರ್ತಿಯು ಸುಮಾರು ಆರಡಿ ಎತ್ತರವಿದ್ದು, ಪೇಟ, ಕೋಟು, ಕಚ್ಚೆ ಪಂಚೆ, ಪಾದಗಳಲ್ಲಿ ಚಡಾವು, ಕೈಯಲ್ಲಿ ಬೆತ್ತ, ಹಾಗೆಯೇ ಎದೆ ಕಡೆಗೆ ಅವುಚಿಕೊಂಡಿರುವ ಎಡಗೈಯಲ್ಲಿನ ಪುಸ್ತಕಗಳು, ಧರಿಸಿದ ಕೋಟಿನ ಮೇಲೆ ಶಲ್ಯವೊಂದು ಬಲತೋಳನ್ನು ಬಳಸಿ ಎಡ ಭುಜದ ಮೇಲಿಂದ ಇಳಿಬಿಟ್ಟಂತಿದೆ. ಇಡೀ ಶಿಲ್ಪವನ್ನು ನೋಡುತ್ತಿದ್ದಂತೆಯೇ ಅಪ್ಪಟ ಮೈಸೂರು ಶೈಲಿಯ ಉಡುಪು ಎಂದು ಗುರ್ತಿಸ ಬಹುದಾಗಿದ್ದು, ಕಣ್ಮನ ತಣಿಸುತ್ತವೆ. ಅದಕ್ಕನುಗುಣವಾಗಿ ಸುಮಾರು ಎರಡಡಿ ಎತ್ತರದ ಪೀಠವು ಸೇರಿದಂತೆ ಏಕಶೀಲಾ ಮೂರ್ತಿಯಾಗಿದೆ.

ಆ ಪೀಠದಲ್ಲಿ ವೃದ್ಧಪಿತಾಮಹ ದಯಾ ಸಾಗರ ಎಂ. ವೆಂಕಟಕೃಷ್ಣಯ್ಯ ಅವರ ಅಮೃತ ಶಿಲಾಶಿಲ್ಪ, ಜನನ 5-9-1844 ಮರಣ 8-11-1933. ಶಿಲ್ಪಿ ಎನ್. ನಾಗೇಂದ್ರಸ್ತಪತಿ, ಶ್ರೀ ಶಿಲ್ಪವಿದ್ಯಾಲಯ, ಗುರುಕುಲ ಮೈಸೂರು 1969 ಎಂದು ಕೆತ್ತಿರುವುದನ್ನು ಕಾಣಬಹುದಾಗಿದೆ.

ಈ ಉನ್ನತ ಶಿಲ್ಪದ ತಳಪೀಠ ಕಗ್ಗಲ್ಲಿನಿಂದ ಮಾಡಿದ್ದು ಸುಮಾರು ಐದಡಿ ಎತ್ತರವಿದೆ. ಈ ಮೂರ್ತಿಗೊಂದು ಮಂಟಪ ಕಟ್ಟಿ ಅದಕ್ಕೊಂದು ಕಿರಿದಾದ ಗೋಪುರವನ್ನು ಸಹ ನಿರ್ಮಾಣ ಮಾಡಿದ್ದಾರೆ. ಮೈಸೂರಿನ ಜನನಿಬಿಡ ಪ್ರದೇಶವಾದ ಅರಮನೆ ಕೋಟೆ ಆವರಣಕ್ಕೆ ಅಂಟಿಕೊಂಡಿರುವ ಬಸ್ ನಿಲ್ದಾಣ, ಸಂತೆಪೇಟೇಗೆ ಮತ್ತೊಂದು ಮಗ್ಗುಲಾದ ಲಾನ್ಸಡೌನ್ ಬಿಲ್ಡಿಂಗ್ ಎಂಬ ಹಳೆಯ ವಾಣಿಜ್ಯಕಟ್ಟಡ ಸಮುಚ್ಚಯದ ಮುಂಭಾಗದಲ್ಲಿರುವ ಕಿರು ಉದ್ಯಾನವೊಂದರಲ್ಲಿ ನೆಲೆಗೊಳಿಸಲಾಗಿದೆ. ಇದರ ಉದ್ಘಾಟನೆಯನ್ನು ಅಂದಿನ ರಾಷ್ಟ್ರಪತಿಗಳಾದ ಸನ್ಮಾನ್ಯ ಶ್ರೀ ವಿ.ವಿ. ಗಿರಿಯವರು 1970ರಲ್ಲಿ ನೆರವೇರಿಸಿದರು.

ದೇವದಾನವರನ್ನು ಕುರಿತಂತೆ ಮೂರ್ತಿ ಶಿಲ್ಪಗಳನ್ನು ಪುರಾಣ ಕತೆಯನ್ನಾಧರಿಸಿದ ಭಿತ್ತಿ ಶಿಲ್ಪಗಳನ್ನು ವ್ಯಕ್ತಿಯ ವ್ಯಕ್ತಿತ್ವವನ್ನರಹುವ ಪೂರ್ಣ ಪ್ರಮಾಣದ ವ್ಯಕ್ತಿ ಶಿಲ್ಪಗಳನ್ನು ಅಧಿಕ ಸಂಖ್ಯೆಯಲ್ಲಿ ಮಾಡಿರುವ ಸ್ತಪತಿಯವರು ಬಣ್ಣದ ಶಿಲ್ಪ ಮತ್ತು ಭಾವ ಶಿಲ್ಪಗಳನ್ನು ಮಾಡುವ ಮೂಲಕ ಶಿಲ್ಪಕಲೆಯ ವಿವಿಧ ಮುಖಗಳನ್ನು ದರ್ಶಿಸುತ್ತಾರೆ.

ಬಣ್ಣದ ಶಿಲ್ಪ

ಬಣ್ಣದ ಶಿಲ್ಪ, ಆಂಧ್ರ ಪ್ರದೇಶಕ್ಕೆ ವರ್ಣ ಶ್ರೇಷ್ಠಿದಂಪತಿಗಳ ಶಿಲ್ಪಗಳನ್ನು ಪೂರ್ಣ ಪ್ರಮಾಣದಲ್ಲಿ (Life Size) ಮಾಡಿ ಅವುಗಳಿಗೆ ಬಣ್ಣ

ಹಚ್ಚಿದ್ದಾರೆ. ಅಮೃತ ಶಿಲೆಯ ಮೇಲೆ ಹಚ್ಚಿರುವ ಬಣ್ಣ ಎಷ್ಟು ನೈಜತೆಯಿದೆ ಎಂದರೇ ಹಿಂಬದಿಯ ಪ್ರಭಾವಳಿ, ತಳಪೀಠಗಳನ್ನು ನೋಡಿಯೇ ಇದೊಂದು ಶಿಲ್ಪವೆಂದು ತಿಳಿಯಬಹುದಾಗಿದೆ. ಇಲ್ಲವಾದರೇ ಇದೊಂದು ವ್ಯಕ್ತಿಚಿತ್ರ (Life Size Painting) ವೆಂದೇ ಭಾವಿಸಬೇಕಾಗುತ್ತದೆ.

ಸಾಮಾನ್ಯವಾಗಿ ಬಣ್ಣದ ಶಿಲ್ಪಗಳನ್ನು ಮಾಡಿಸುವವರು ವಿರಳ. ಅದಕ್ಕೆ ಕಾರಣವೂ ಇಲ್ಲದಿಲ್ಲ. ನುಣುಪಾಗಿ ಕೆತ್ತಿರುವ ಆ ಕಲ್ಲುಗಳ ಮೇಲೆ ಹಚ್ಚಿದ ಬಣ್ಣ ದೀರ್ಘಕಾಲ ಇರುವುದಿಲ್ಲ. ಅದು ಅನತಿಕಾಲದಲ್ಲಿಯೇ ಮೂಲದ ಸೊಗಡನ್ನು ಕಳೆದುಕೊಂಡು ಕಳಾಹೀನವಾಗುತ್ತದೆ. ಪುನಃ ಅದನ್ನು ಅನುಭವಿ ಕಲಾವಿದನಿಂದಲೇ ಬಣ್ಣಗಾರಿಕೆ ಮಾಡಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ಮೂಲದ ತಾಜಾತನ ಮತ್ತೆ ಬರುತ್ತದೆಯೆಂಬ ಖಾತ್ರಿ ಇರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಬಣ್ಣದ ಶಿಲ್ಪ ಕೆಲವೇ ಕಲಾರಸಿಕರ ಮನೋಭಿಲಾಷೆಗನುಗುಣವಾಗಿ ರೂಪಿತವಾಗುತ್ತದೆ.

ಭಾವಶಿಲ್ಪ

ವ್ಯಕ್ತಿ ಚಿತ್ರ ಮತ್ತು ಭಾವ ಶಿಲ್ಪಗಳಿಗೆ ಬಣ್ಣ ಹಚ್ಚುವ ಕ್ರಮವನ್ನು ಕ್ರಿ. ಪೂ. 3-4 ಶತಮಾನದ ಹಿಂದಯೇ ಈಜಿಪ್ಟನಲ್ಲಿನ ಕೆಲವು ಶಿಲ್ಪಗಳಲ್ಲಿ ಕಾಣಬಹುದು. ಭಾವ ಶಿಲ್ಪಗಳಿಗೆ ಸ್ತಪತಿಯವರು ವ್ಯಾಕ್ಸ ಪಾಲಿಸ್ ಮಾಡಿಕೊಟ್ಟವು ಸಹ ಉಂಟು. ದೇವಾಲಯ ನಿರ್ಮಾಣಕ್ಕೆ ಸಹಾಯ ಮಾಡಿದ ದಾನಿಗಳ ಕುರಿತಂತೆ ಅಮ್ಮಿನಗಡ ಎಂಬಲ್ಲಿಗೆ ನಾಲ್ಕಡಿ ಎತ್ತರದ ಎದೆ ಮೊಗದ ಶಿಲ್ಪವನ್ನು ಮಾಡಿಕೊಟ್ಟಿದ್ದಾರೆ. ಬಣ್ಣಗಾರಿಕೆ ಕಲ್ಗೆತ್ತನೆಗಳೆರಡು ಸ್ತಪತಿಯವರಿಗೆ ಕರತಲಾಮಲಕವಾಗಿದ್ದ ಕಾರಣ ಬಹಳ ದೂರ ದೂರದಿಂದ ವ್ಯಕ್ತಿ ಶಿಲ್ಪಗಳನ್ನು ಮಾಡಿಸಿ ಕೊಳ್ಳಲು ಜನ ಬರುತ್ತಿದ್ದರು.



ವಿಧಾನ ಸೌಧ

ಕನ್ನಡಿಗರ ಹೃದಯ ಸಿಂಹಾಸನವೆನಿಸಿರುವ ಬೆಂಗಳೂರಿನ ವಿಧಾನಸೌಧದ ಗೋಪುರದ ವಾಸ್ತು ವಿನ್ಯಾಸವನ್ನು ರಚಿಸಿದವರು ಶ್ರೀ ನಾಗೇಂದ್ರ ಸ್ತಪತಿಗಳವರು. ದ್ರಾವಿಡ ಶೈಲಿಯಲ್ಲಿ ನಿರ್ಮಾಣ ಮಾಡಬೇಕೆಂಬ ಅಭಿಪ್ರಾಯವನ್ನು ಖಂಡಿಸಿ ಚೋಳ ಶೈಲಿ ತಕ್ಕದೆಂದು ಆಧಾರ ಸಹಿತ ಉಲ್ಲೇಖ ಮಾಡಿ, ಸಂಬಂಧಿಸಿದ ಮಂತ್ರಿ ಮಹೋದಯರನ್ನು ಅಧಿಕಾರಗಳಲ್ಲಿ ಮನವರಿಕೆ ಮಾಡಲು ಯಶಸ್ವಿಯಾದರು. ಆದರೇ ಸ್ತಪತಿಯವರು ನೀಡಿದ ಗೋಪುರದ ಅಳತೆಯಲ್ಲಿಯೇ ನಿರ್ಮಾಣವಾಗಿದ್ದರೇ ಈಗ ಕಾಣುತ್ತಿರುವುದಕ್ಕಿಂತ ಉನ್ನತವಾಗಿ, ಭವ್ಯವಾಗಿ ಕಾಣುತ್ತಿತ್ತು. ಸರ್ಕಾರದ ಹಣಕಾಸಿನ ಇಲಾಖೆಯ ನಕಾರಾತ್ಮಕ ದೋರಣೆಯಿಂದ ಈಗ ಕಾಣುತ್ತಿರುವಂತೆ ಕುಬ್ಜಗೊಂಡಿತು.

ಮುಖ್ಯಮಂತ್ರಿಗಳ ಸ್ನೇಹ

ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆಂಗಲ್ ಹನುಮಂತಯ್ಯ ಅವರು ಆ ಮಾದರಿಯನ್ನು ಬಹಳವಾಗಿ ಮೆಚ್ಚಿ ಮುಖ್ಯ ವಾಸ್ತು ವಿನ್ಯಾಸಕಾರರಾಗಿ ಅವರನ್ನೇ ನೇಮಿಸಿದರು. ಮೈಸೂರಿನ ಅರಮನೆಯಂತೆ ವಿನ್ಯಾಸಗೊಳಿಸಬೇಕೆಂಬ ಬೃಹದಾಶೆ ಅವರದಾಗಿತ್ತು. ಅದಕ್ಕೆ ಪೂರಕವಾಗಿ ಶ್ರೀ ನಾಗೇಂದ್ರ ಸ್ಥಪತಿಗಳಂತಹ ಉತ್ತಮ ಕಲಾಕಾರರು, ಶಿಲ್ಪಿಗಳು ದೊರೆತದ್ದು ಹಾಲು ಜೇನು ಬೆರೆತಂತೆ ಆಗಿತ್ತು. ಶ್ರೀ ಕೆಂಗಲ್ ಹನುಮಂತಯ್ಯನವರಿಗೂ ಸ್ಥಪತಿಯವರಿಗೂ ಅತ್ಯಂತ ಗಾಢವಾದ ಸ್ನೇಹವಾಗಿ ಆಗಾಗ್ಗೆ ಕಟ್ಟಡದ ವಿನ್ಯಾಸದ ಬಗ್ಗೆ, ಹಾಗೂ ಒಳಾಂಗಣದ ಭಿತ್ತಿ ಚಿತ್ತಾರದ ರೂಪರೇಶೆಗಳನ್ನು ಚರ್ಚಿಸಲು ಗುರುಕುಲಕ್ಕೆ ಬರುತ್ತಿದ್ದರು. ಸಮಯವಿಲ್ಲದಿದ್ದರೇ ತಮ್ಮ ಕಾರನ್ನು ಕಳುಹಿಸಿ ಸ್ಥಪತಿಯವರನ್ನು ಬರಮಾಡಿಕೊಳ್ಳುತ್ತಿದ್ದರು.

ಅರಮನೆ ಗುರುಮನೆ

ಮುಖ್ಯವಾಗಿ ಗಮನಿಸಬೇಕಾದ ವಿಚಾರವೆಂದರೇ ಅರಮನೆಯ ನಿರ್ಮಾಣ ಕಾಲದಲ್ಲಿ ಅಲ್ಲಿನ ಕಲಾಸೌಂದರ್ಯದ ಸೊಬಗನ್ನು, ಭಕ್ತಿ ಭಾವನೆಗಳ ಪರವಶತೆಯನ್ನು ಶ್ರೀ ಸಿದ್ದಲಿಂಗ ಸ್ವಾಮಿಗಳವರಿಂದ ಮಹಾರಾಜರು ಪಡೆದುಕೊಂಡರು. ಅರಮನೆಯೇ ಗುರುಮನೆಯಾಗಿ, ಗುರುಮನೆಯೇ ಅರಮನೆಯಂತಾಗಿ ಭಕ್ತಿ ಗೌರವಗಳ ತಾಣವಾಗಿತ್ತು. ಮಹಾರಾಜರವರಿಂದ ಸ್ವಾಮಿಗಳವರಿಗೆ ಸಕಲ ಗೌರವಗಳು ಲಭಿಸಿದ್ದವು. ಹಾಗೆಯೇ ಮುಖ್ಯ ಮಂತ್ರಿಗಳಿಂದ ನಾಗೇಂದ್ರ ಸ್ಥಪತಿಯವರಿಗೂ ಗೌರವಾದರಗಳು ದೊರಕಿ, ಅವರಿಂದ ಶಾಸ್ತ್ರ ಸಮ್ಮತವಾದ ಸಲಹೆ ಸೂಚನೆಯನ್ನು ಬಯಸುತ್ತಿದ್ದರು.

ತೃಪ್ತಿ ಜೀವನ

ಇಲ್ಲಿ ಪ್ರಮುಖವಾಗಿ ಕಂಡು ಬರುವ ವಿಚಾರವೆಂದರೇ ಸ್ವಾಮಿಗಳವರು ಮಹಾರಾಜರಿಂದ ತಮಗಾಗಿ ಏನನ್ನು ಬಯಸಲಿಲ್ಲ. ಹಾಗೆಯೇ ಅವರ ಪುತ್ರರಾದ ನಾಗೇಂದ್ರ ಸ್ತಪತಿಯವರು ಸಹ ಮುಖ್ಯ ಮಂತ್ರಿಗಳಿಂದ ಸ್ವಂತಕ್ಕಾಗಿ ಏನೇನು ಮಾಡಿಕೊಳ್ಳಲಿಲ್ಲ. ಬಯಸಿದ್ದರೇ ಬೇಕಾದಷ್ಟು ಮಾಡಿಕೊಳ್ಳಬಹುದಾಗಿತ್ತು. ಪೂರ್ಣಗೊಂಡ ಕಟ್ಟಡವನ್ನು ನೋಡಿ, ಎಲ್ಲಾ ಕಡೆಯಿಂದ ಬಂದ ಶ್ಲಾಘನೆಯ ಸುರಿಮಳೆಯನ್ನು ಕೇಳಿ ಆನಂದಭರಿತರಾದ ಮುಖ್ಯ ಮಂತ್ರಿಗಳು ಸ್ತಪತಿಯವರನ್ನು ಕುರಿತು ಏನು ಬೇಕೋ ಕೇಳಿ, ಮಾಡೋಣ ಅಂದರಂತೆ. ನಸುನಗುತ್ತಾ ನಿಮ್ಮ ಸ್ನೇಹ ಅಭಿಮಾನವೊಂದಿರಲಿ ಎಂದು ಯಾವ ಅಪೇಕ್ಷೆಯನ್ನು ವ್ಯಕ್ತಪಡಿಸಲಿಲ್ಲವೆಂಬುದನ್ನು ಅವರ ಶ್ರೀಮತಿ ಲಲಿತಮ್ಮನವರು ಈಗಲೂ ನೆನಸಿಕೊಳ್ಳುತ್ತಾ, ಇದೇನಪ್ಪಾ ನಿಮ್ಮ ಗುರುಗಳು ಮಾಡಿದ ಕೆಲಸ ಎಂದು ಸಂದರ್ಶನ ಕಾಲದಲ್ಲಿ ಹೇಳಿದ ಮಾತು ಮನನೀಯ. ಸ್ತಪತಿಯವರ ಹೃದಯ ವೈಶಾಲ್ಯ, ಆಸೆ ರಹಿತ ಬದುಕು, ಎಷ್ಟು ಇತ್ತೋ ಅಷ್ಟರಲ್ಲಿಯೇ ತೃಪ್ತಿ, ಅವರ ಸಾತ್ವಿಕ ಗುಣಕ್ಕೆ ಹಿಡಿದ ಕೈಗನ್ನಡಿ. ಜೀವನಕ್ಕಾಗಿ ಕಲೆ ಅವಲಂಬಿಸಿರಲಿಲ್ಲ. ಕಲೆಗಾಗಿಯೇ ಜೀವನವನ್ನು ಅರ್ಪಿಸಿದ್ದ ಅಪೂರ್ವ ಶಿಲ್ಪಿಗಳವರು.

ಅಂದದ ಅಲಂಕರಣ

ನಾಗೇಂದ್ರ ಸ್ತಪತಿಗಳ ಶಿಲ್ಪಗಳು ರಾಜ್ಯಕ್ಕೆ ಮಾತ್ರ ಸೀಮಿತಗೊಂಡಿರಲಿಲ್ಲ. ಇವರ ಖ್ಯಾತಿ ದೇಶವಿದೇಶಗಳಿಗೆ ಹಬ್ಬಿತ್ತು. ರಾಜ್ಯದಲ್ಲಿಯಂತೂ ಎಲ್ಲೇ ದೇವಾಲಯ ನಿರ್ಮಾಣವಾಗಲೀ, ಪ್ರಥಮ ಬೇಡಿಕೆ ಸಲ್ಲುತ್ತಿದ್ದುದೇ ನಾಗೇಂದ್ರ ಸ್ತಪತಿಯವರಲ್ಲಿ. ಬಂದ ಕೆಲಸವೆಲ್ಲವನ್ನೂ ಒಪ್ಪಿಕೊಳ್ಳುತ್ತಿರಲಿಲ್ಲ. ಸೌಜನ್ಯಪೂರಿತವಾಗಿ ಇತರ

ಶಿಲ್ಪಿಗಳ ಹೆಸರನ್ನು ನೀಡಿ ಅವರ ಬಳಿಗೆ ಕಳಿಸುತ್ತಿದ್ದರು. ತಮ್ಮಂತೆಯೇ ಇನ್ನಿತರ ಕಲಾವಿದರನ್ನು ಶಿಲ್ಪಿಗಳನ್ನು ಗೌರವಿಸುತ್ತಿದ್ದರು. ಸ್ತಪತಿಯವರು ವಿದಾನಸೌಧದ ಮುಖ್ಯ ಕಲಾವಿನ್ಯಾಸಕರಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದ್ದಾರೆ. ವಿಧಾನಸೌಧದೊಳಗಿನ ಪ್ರತಿ ಅಲಂಕರಣವೂ ಸ್ತಪತಿಯವರ ಕಲ್ಪನೆಯ ಮೂಸೆಯಿಂದ ಹೊರಬಂದವು. ವಿಧಾನಸೌದದ ಇಕ್ಕೆಲಗಳಲ್ಲಿ ಕಂಡುಬರುವ ದ್ವಾರ ವಿನ್ಯಾಸ ಒಳಮ್ಮೆಗಳಲ್ಲಿ ಶೋಭಿಸುವ ಕುಶರೀ ಕೆಲಸ, ಸಿಮೆಂಟ್ ಕಂಬಗಳ ಮೇಲೆ ಕಣ್ಮನ ಸೆಳೆಯುವ ಭಿತ್ತಿಯ ಚಿತ್ತಾರ ಸ್ತಪತಿಯವರ ಸೌಂದರ್ಯ ಪ್ರಜ್ಞೆಗೆ ಸಾಕ್ಷಿಯಾಗಿವೆ.

ಸ್ತಪತಿಯವರು ಸುಮಾರು ಹನ್ನೆರಡು ಅಡಿ ಎತ್ತರದ ಅಶೋಕ ಸ್ತಂಭವನ್ನು ಹಾಗೂ ಮಹಾರಾಜ ಕಾಲೇಜಿನ ಮುಂಭಾಗದಲ್ಲಿ ಸ್ಥಾಪಿಸಿರುವ ಸರಸ್ವತಿ ವಿಗ್ರಹಗಳನ್ನು ಮೈಸೂರಿನಲ್ಲಿ ಕಾಣಬಹುದಾಗಿದೆ.

ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸರಸ್ವತಿ ಮೂರ್ತಿ ಮತ್ತು ಸುಮಾರು 9 ಅಡಿ ಎತ್ತರವಿರುವ, ರಾಸಾಯನಿಕ ವಿದ್ಯಾರ್ಥಿಯೋರ್ವನು ತನ್ನ ಪ್ರಯೋಗಾಲಯ ಸಲಕರಣೆಯೊಂದಿಗೆ ನಿಂತಿರುವಂತೆ ತೋರುವ ಉಬ್ಬುಶಿಲ್ಪವೊಂದನ್ನು ಮಾಡಿಕೊಟ್ಟಿದ್ದಾರೆ.

ಗೌರವಾದರ

ಇದಲ್ಲದೇ, ಚಿಕ್ಕಮಗಳೂರಿಗೆ ರಾಮ, ಲಕ್ಷ್ಮಣ , ಸೀತೆ ಆಂಜನೇಯ ಸಹಿತವಾದ ವಿಗ್ರಹ, ಗುಲ್ಬರ್ಗಾಕ್ಕೆ ಮಹಾಕಾಳಿ, (1956) ದಾವಣಗೆರೆಗೆ ಪಾರ್ಶ್ವನಾಥ, (1950) ಹಾವೇರಿಗೆ ಬಸವೇಶ್ವರ, ವೀರಭದ್ರಸ್ವಾಮಿ. ನರೇಗಲ್ಲಿಗೆ ಸಿಂಹವಾಹಿನಿ, ಕೂಡಲಿಗೆ ಶಾರಾದಾ ದೇವಿ, ಬಳ್ಳಾರಿ ಜಿಲ್ಲೆಗೆ ಜಡೆಸಿದ್ಧ ಯೋಗಿಗಳು, ವೆಂಕಟೇಶ್ವರ ದತ್ತಾತ್ರೇಯ ಸ್ವಾಮಿ, ಮುಖ್ಯವೆನಿಸುತ್ತದೆ. ಬೀದರ್ ಸಮೀಪದ ಬಸವಕಲ್ಯಾಣದ ಅಕ್ಕ ಮಹಾದೇವಿ

ಗುಹೆಗೆ ಮಾಡಿಕೊಟ್ಟು, ಪೂಜಾನಿರತ ಅಕ್ಕಮಹಾದೇವಿ ವಿಗ್ರಹವು, ಅತ್ಯಂತ ಸುಂದರವಾಗಿ ಹೊರಹೊಮ್ಮಿದ್ದು, ದುಂಡುಮುಖದ ನೊಸಲಲ್ಲಿ ವಿಭೂತಿ, ಅರೆತೆರದ ಕಣ್ಗಳು ತನ್ನ ಕರದಲ್ಲಿರುವ ಇಷ್ಟಲಿಂಗದ ಕಡೆಗೆ ದೃಷ್ಟಿಹಾಯಿಸಿದಂತಿದ್ದು ಮತ್ತೊಂದು ಕೈಯಲ್ಲಿ ಪುಷ್ಪವನ್ನು ಹಿಡಿದು ಕುಳಿತಂತೆ ಇದೆ.

ದೇವಸ್ಥಾನದ ವ್ಯವಸ್ಥಾಪಕರು ಅದನ್ನು ಅದ್ದೂರಿಯಿಂದ ಮೆರವಣಿಗೆಯಲ್ಲಿ ಕೊಂಡೊಯ್ದು ಗುಹೆಯನ್ನು ಪ್ರತಿಷ್ಠಾಪಿಸಿದರೆಂದು ತಿಳಿದು ಬರುತ್ತದೆ. ಅಲ್ಲಿನ ವ್ಯವಸ್ಥಾಪಕರಾದ ಶ್ರೀ ಸಿ.ಎಂ. ವಾರದ್ ಅವರು ಸ್ತಪತಿಯವರಿಗೆ ಬರೆದ ಕಾಗದದಲ್ಲಿ ಹೀಗೆ ಬರೆದಿದ್ದಾರೆ. “Everyone appreciated the time workmanship of image (ಶಿಲ್ಪಸಂಕುಲ ಪುಟ 28)

ಅಂತರಾಷ್ಟ್ರೀಯ ಖ್ಯಾತಿ

ಸ್ತಪತಿಯುವರ ಶಿಲ್ಪಗಳು ಕರ್ನಾಟಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವವಾದರೂ ಹೊರಗೆ ರಾಷ್ಟ್ರ, ಅಂತರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿವೆ. 1954ರಲ್ಲಿ ಮದ್ರಾಸಿನ ಭವಾನಿ ಪ್ರಾಜೆಕ್ಟ್‌ಗೆ ಭವಾನಿದೇವಿಯನ್ನು, ಬೊಂಬಾಯಿನ ರುಯಿಯಾ ಅಂಡ್ ಕಂಪನಿಯವರಿಗೆ ಬುದ್ಧ, ರಾಮದೇವ, ಗಣಪತಿಗಳನ್ನು, ಆಂಧ್ರಪ್ರದೇಶಕ್ಕೆ ಪಾಮುಡಿ ಸತ್ಯನಾರಾಯಣಸ್ವಾಮಿಯನ್ನು, ತಿರುವಾಯೂರಿಗೆ ಹತ್ತಾರು ಭಿತ್ತಿಶಿಲ್ಪಗಳನ್ನು ಹಾಗೂ ಕೆಲವು ಸ್ಥಾನಿಕ ಶಿಲ್ಪಗಳನ್ನು ಮಾಡಿಕೊಟ್ಟಿರುವುದರ ಜೊತೆಗೆ, ಆಂದ್ರಕ್ಕೆ ರುಕ್ಮಿಣಿ ಸಹಿತನಾದ ವಿಠ್ಠಲ ಮೂರ್ತಿ, ಅಜ್ಮೀರ್‌ನಲ್ಲಿನ ಪುಸ್ಕರ ಎಂಬಲ್ಲಿಗೆ ಮಹಾಸುದರ್ಶನ ಚಕ್ರ ಮಾಡಿಕೊಟ್ಟಿದ್ದಾರೆ.

ಸ್ತಪತಿಯವರಿಗೆ ಅಂತರರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟ

ಸುಮಾರು ಆರುವರೆ ಅಡಿ ಎತ್ತರವಿರುವ ವೀರ ವಿಠ್ಠಲ ಮೂರ್ತಿಯು ವಾಷಿಂಗ್‌ಟನ್ (U.S.A) ನಲ್ಲಿ ಸ್ಥಾಪನೆಗೊಂಡಿದೆ. ಇವೆಲ್ಲವೂ ಸ್ತಪತಿಯವರ ಸಾಧನೆಯ ಮೈಲಿಗಲ್ಲುಗಳು. ಸ್ತಪತಿಯವರಿಗೆ ತಾವೋರ್ವ ಉನ್ನತ ಶಿಲ್ಪ ಪರಂಪರೆಯಿಂದ ಬಂದವರೆಂದಾಗಲೀ, ಹೆಚ್ಚಿನ ಕಲಾ ಪಾಂಡಿತ್ಯ ಪಡೆದವನೆಂದಾಗಲೀ, ಅಹಂ ಇರಲಿಲ್ಲ. ಸಜ್ಜನಿಕೆಯ ಸಾಕಾರ ಮೂರ್ತಿಯಾಗಿದ್ದ ಇವರಲ್ಲಿಗೆ ಅನೇಕ ಜನ ಕಲಾವಿದರು, ಸಾಹಿತಿಗಳು ಬರುತ್ತಿದ್ದರು. ಸ್ವಾಮಿಗಳನ್ನು ದರ್ಶಿಸಲು ವಿಚಾರ ವಿನಿಮಯ ಮಾಡಿಕೊಳ್ಳಲು ವಿದ್ವಾಂಸರುಗಳು, ಮತ್ತಿತರರು ಆಗಮಿಸುತ್ತಿದ್ದರು. ಆದರೇ ರಾಜಗುರುಗಳಾದ ಸ್ವಾಮಿಗಳವರನ್ನು ಅಧಿಕವಾದ ಕಾರ್ಯದೊತ್ತಡದಿಂದ ದರ್ಶಿಸಲು ಸಾದ್ಯವಾಗುತ್ತಿರಲಿಲ್ಲ.

ಸಹ ಕಲಾವಿದರು

ಸಹಜವಾಗಿ ಸಿಗುತ್ತಿದ್ದವರೆಂದರೇ ಎಸ್.ಎನ್. ಸ್ತಪತಿಯವರು ಮಾತ್ರ. ಸಕಲ ಮೇಲ್ವಿಚಾರಣೆ ಜವಾಬ್ದಾರಿಯನ್ನೊತ್ತ ಇವರು ಸದಾಕಾಲ ಗುರುಕುಲದಲ್ಲಿರುತ್ತಿದ್ದರು. ಚಿತ್ರ ಶಿಲ್ಪಾದಿಗಳನ್ನು ತಂದೆಯವರ ಆಶೀರ್ವಾದ ಬಲದಿಂದ ಕಲಿತಿದ್ದ ಪಾಂಡಿತ್ಯ ಪ್ರತಿಭೆಯನ್ನು ಇತರರೊಡನೆ ಮುಕ್ತವಾಗಿ ಹಂಚಿಕೊಳ್ಳುತ್ತಿದ್ದರು. ಸ್ತಪತಿಯವರಿಗಿಂತ 3 ವರ್ಷ ಕಿರಿಯರಾಗಿ ರೊಮ್ಯಾಂಟಿಕ್ ಕಲೆಯಲ್ಲಿ ಹೆಸರು ಮಾಡಿದ ಎಸ್.ಎಂ. ಪಂಡಿತರು 7 ವರ್ಷ ಕಿರಿಯರಾದ ಕಥಾ ಚಿತ್ರ ರಚನೆಯನ್ನು ಖ್ಯಾತಿಗಳಿಸಿ, ಚಂದಮಾಮ ಆಚಾರ್ಯರೆಂದೇ ಕರೆಯಲ್ಪಡುತ್ತಿದ್ದ ಎಂ.ಟಿ.ವಿ. ಆಚಾರ್ಯರವರು, ಹದಿನೇಳು ವರ್ಷ ಕಿರಿಯರಾದ ದೇವನಹಳ್ಳಿ ಆಚಾರ್ಯರು ಹಾಗೂ ದೇವಲಕುಂದ ವಾದಿರಾಜ, ಸಾಹಿತ್ಯಕ್ಷೇತ್ರದಲ್ಲಿ ಅದ್ವಿತೀಯಸ್ಥಾನ ಪಡೆದ ಕನ್ನಡ ಚಳುವಳಿಯ ನೇತಾರ ಅ.ನ.ಕೃ., ತ.ರಾ.ಸು., ಹಿರಿಯ ಕಲಾವಿಮರ್ಶಕರಾದ ಬಿ.ವಿ.ಕೆ., ಬಿ.ಹೆಚ್. ರಾಮಚಂದ್ರ,

ಪಿ.ಆರ್. ತಿಪ್ಪೇಸ್ವಾಮಿ ಮುಂತಾದವರೆಲ್ಲರೂ ಸ್ತಪತಿಯುವರ ಸಮಕಾಲೀನರಾಗಿ, ಚಾಮರಾಚೇಂದ್ರ ತಾಂತ್ರಿಕ ಕಲಾ ಶಾಲೆಯ ಸಂಪರ್ಕವಿಟ್ಟುಕೊಂಡವರಾಗಿ, ವಿದ್ಯಾರ್ಥಿ ದೆಸೆಯ ನಾನಾ ವಿಚಾರಗಳಲ್ಲಿಯೂ ಪರಸ್ಪರ ಸಮಾಲೋಚನೆಯಲ್ಲಿ ತೊಡಗುತ್ತಿದ್ದರೆಂಬ ವಿಚಾರ ಸಮಕಾಲೀನರಿಂದ ತಿಳಿದು ಬರುತ್ತದೆ.

ನಾವು ಇಂದು ನಮ್ಮ ಹಿರಿಯ ಕಲಾವಿದರೆಂದು ಗುರುತಿಸಲ್ಪಡುವ ಮೈಸೂರು ರಾಜ್ಯಕ್ಕೆ ಸಂಬಂದಿಸಿದವರೆಲ್ಲರೂ ಸ್ವಾಮಿಗಳ ಹಾಗೂ



ಸ್ಥಪತಿಯವರ ಕಲಾ ಪಾಂಡಿತ್ಯಕ್ಕೆ ಮನಸೋತವರೇ, ಅವರಿಂದ ಪ್ರೇರಣೆಗೊಂಡವರೇ ಎಂದರೇ ತಪ್ಪಾಗಲಿಕ್ಕಿಲ್ಲ.

ಸಂಘಟಿಕರಾಗಿ

ಸ್ಥಪತಿಯವರು ಅನೇಕ ಸಾಹಿತ್ಯಿಕ ಚಟುವಟಿಕೆಗಳನ್ನು ತಮ್ಮ ಸಹಪಾಠಿಗಳೊಡನೆ ನಡೆಸುತ್ತಿದ್ದರು. ಅದರಲ್ಲಿ ಮುಖ್ಯವಾದವುಗಳೆಂದರೇ 7-8-1946ರಲ್ಲಿ ಪ್ರಾರಂಭಿಸಿದ ಶೈವಶಿಲ್ಪಿ ಯುವಜನ ಸಂಘ ಇದರ ಉಪಾದ್ಯಕ್ಷರಾಗಿ, ಖಜಾಂಚಿಯಾಗಿ ಹಲವಾರು ವರ್ಷ ಸೇವೆ ಸಲ್ಲಿಸಿದ್ದಾರೆ. ಅನೇಕ ಯುವ ಶಿಲ್ಪಿಗಳಿಗೆ, ಕಲಾಶಕ್ತರಿಗೆ ಉದಯೋನ್ಮುಖರಿಗೆ ಚಿತ್ರ ಮತ್ತುಶಿಲ್ಪಕಲೆಯ ಮರ್ಮಗಳನ್ನು ತಿಳಿಸುವುದರ ಜೊತೆಗೆ ಸಂಘಟನೆಯ ಅವಶ್ಯಕತೆ, ಶೈವ ಶಿಲ್ಪದ ಪರಂಪರೆ, ಅದರ ಬೆಳವಣಿಗೆ ಅವಶ್ಯಕತೆಗಳು ಕುರಿತಂತೆ ಕಿರು ಹೊತ್ತಿಗೆಗಳನ್ನು ಪ್ರಕಟಿಸಿದ್ದಾರೆ.

"ಶೈವ ಶಿಲ್ಪಿ ಪ್ರಭಾ" ಎಂಬ ಪ್ರಸಿದ್ಧ ಪತ್ರಿಕೆ ಮುದ್ರಣ ಮಾಡಿ ಅದರಲ್ಲಿ ಶ್ರೀ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗ ಸ್ವಾಮಿಗಳವರ ಅನುಗ್ರಹ ಭಾಷಣಗಳನ್ನು ಮುದ್ರಿಸಿದ್ದಾರೆ. ಪ್ರತಿವರ್ಷ ಆರಾಧನ ಸಂದರ್ಭದಲ್ಲಿ (ಪುಷ್ಯಮಾಸ) ಪೂಜ್ಯ ಸ್ವಾಮೀಜಿಯವರು ಜನರನ್ನುದ್ದೇಶಿಸಿ ಮಾಡುತ್ತಿದ್ದ ಪಾಂಡಿತ್ಯ ಪೂರ್ಣ ಭಾಷಣವು ಒಂದೊಂದು ಅಮೂಲ್ಯ ರತ್ನಗಳಿದ್ದಂತೆ. ಅವುಗಳನ್ನು ಮುದ್ರಣಗೊಳಿಸುವುದರ ಮೂಲಕ ಪ್ರಚುರ ಪಡಿಸುವ ಕಾರ್ಯವನ್ನು ಸ್ಥಪತಿಯವರು ಮತ್ತಿತರ ಪದಾಧಿಕಾರಿಗಳು ಅತ್ಯಂತ ಪರಿಣಾಮಕಾರಿಯಾಗಿ ಮಾಡಿದರು.

ಗುರುಕುಲ ಉದ್ಘಾಟನೆ

ಈ ಎಲ್ಲಾ ಚಟುವಟಿಕೆಗಳಿಗೆ ಕೇಂದ್ರ ಗುರುಕುಲವೆಂದು ಬೇರೆ

ಹೇಳಬೇಕಾಗಿಲ್ಲ. ಶ್ರೀ ಜಗದ್ಗುರು ಶೈವ ಶಿಲ್ಪಿ ಬ್ರಹ್ಮರ್ಷಿ ಗುರುಕುಲ ಎಂಬ ನಾಮದೇಯದಿಂದ ಸ್ವಸ್ತಿಶ್ರೀ ಶಾಲಿವಾಹನ ಶಕ 1871ನೆಯ ಶ್ರೀ ಸರ್ವಾಧಾರಿ ಸಂವತ್ಸರದ ಪಾಲ್ಗುಣ, ಶುಕ್ಲ ಸಪ್ತಮಿ ತಾ 7-3-1949 ಸೋಮವಾರ ಪ್ರಾತಃ ಕಾಲ ಹತ್ತುಕಾಲು ಗಂಟೆಗೆ ಮೇಷ ಲಗ್ನ ಧನುರಂಶದಲ್ಲಿ ಶ್ರೀ ಮತ್ಕರ್ಣಾಟಕ ದಿವ್ಯರತ್ನ ಸಿಂಹಾಸನಾದೀಶ್ವರರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಅವರು ಪ್ರಾರಂಭೋತ್ಸವವನ್ನು ನೆರವೇರಿಸಿದರೆಂಬುದು ನಮಗೆ ತಿಳಿದು ಬರುವ ಐತಿಹಾಸಿಕ ಸತ್ಯದ ವಿಚಾರಗಳು. ಆಗ ನಾಗೇಂದ್ರ ಸ್ತಪತಿಗಳವರು ಮತ್ತು ನಾಗಲಿಂಗ ಸ್ವಾಮಿ ಎಂಬುವರು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಅದೊಂದು ಹೃದಯ ಸ್ಪರ್ಶಿ ಸನ್ನಿವೇಶ. ಶ್ರೀಮನ್ ಮಹಾರಾಜರ ಬರುವಿಕೆಗಾಗಿ ಕಾಯ್ದ ಜನಸ್ತೋಮ.

ಸ್ವಾಮಿಗಳವರ ಸೊಗಸಾದ ರೇಶ್ಮೆ ಅಂಚಿನ ಪಂಚೆ, ಉತ್ತಮವಾದ ಮೇಲೊದಿಕೆಗಳು ಕಾವಿಯಿಂದ ಕೂಡಿದ್ದು, ಕಾಲಲ್ಲಿ ಮರದ ಪಾದುಕೆಗಳು, ಕೈಯಲ್ಲಿ ಶಾಸ್ತ್ರದ ಕಟ್ಟು, ಕೊರಳಲ್ಲಿ ರುದ್ರಾಕ್ಷಿ ಸರ, ಹಣೆಯಲ್ಲಿ ಥಾಳವಾದ ತ್ರಿಪುಂಡ್ರ ಭಸ್ಮದಾರಣೆ, ಬೆಳ್ಳಿಯಂತೆ ಮಿಂಚುವ ಗಡ್ಡ ಮೀಸೆಗಳು, ಎತ್ತರವಾದ ನಿಲವುಗಳಿಂದಲೇ ರಾಜಗುರುಗಳೆಂದು ಗುರುತಿಸಬಹುದಾಗಿದ್ದು, ಅವರ ಜೊತೆಯಲ್ಲಿ ನಾಗೇಂದ್ರ ಸ್ತಪತಿಗಳವರು ಬಿಳಿ ಅಂಚಿನ ಕಚ್ಚೆ ಪಂಚೆ, ಅದೇ ಬಿಳಿ ವಸ್ತ್ರದ ಮೇಲೊದಿಕೆ, ತಲೆಯಲ್ಲಿ ಪೇಟ ಧರಿಸಿ (ಪೇಟ ಧರಿಸುವುದು ರಾಜ ಸನ್ನಿದಿಗೆ ಗೌರವ ತೋರಿಸುವ ಸೂಚಕ) ಒಂದು ಕೈಯಲ್ಲಿ ವೇದಪುಸ್ತಕ ಮತ್ತೊಂದು ಕೈಯಲ್ಲಿ ವೇದ ಮಂತ್ರವನ್ನೇಳುತ್ತಾ ಸ್ವಾಗತಿಸುವ ಛಾಮರ ಹಿಡಿದಿದ್ದಾರೆ. ಅವರ ಹಿಂದೆ ಕಳಸ ಕನ್ನಡಿಗಳನ್ನಿಟ್ಟುಕೊಂಡು ನಿಂತ ಸ್ವಾಮಿಗಳವರ ಶಿಷ್ಯಕೂಟ.

ಆಗಮನ

ಶ್ರೀಮನ್ ಮಹಾರಾಜರವರು ದಯಮಾಡಿಸುತ್ತಿದ್ದಂತೆ ಜಯಘೋಶ ವೇದಘೋಶದೊಂದಿಗೆ ಸ್ವಾಗತ. ಮಹಾರಾಜರವರಿಗೆ ವಂದನೆ. ಪ್ರತಿವಂದನೆ ಸಲ್ಲಿಸುವ ಮೂಲಕ ಕಾರ್ಯಕ್ರಮದ ಆರಂಭ. ಹಣೆಯಲ್ಲಿ ಭಸ್ಮ, ಭ್ರೂ ಮಧ್ಯೆ ಕುಂಕುಮದ ಬಟ್ಟು, ತಲೆಯಲ್ಲಿ ಮಿರಿ ಮಿರಿ ಮಿಂಚುವ ಜರೀಪೇಟ, ನೀಳವಾದ ಕೋಟು, ಸರಾಯಿ, ಬೆರಳಲ್ಲಿ ನವರತ್ನ ಖಚಿತ ಉಂಗುರಗಳುಳ್ಳ ಮಹಾರಾಜರ ಮುಖದಲ್ಲಿ ಹೊರಸೂಸುವ ಆ ರಾಜ ತೇಜಸ್ಸು ನೋಡುವುದೊಂದು ಪುಣ್ಯ. ಹಿಂದೆ ದರ್ಬಾರ್ ಭಕ್ಷಿಯವರು ಮತ್ತಿತರ ರಾಜ ಪರಿವಾರ. ಅದೊಂದು ಕಣ್ಗೆ ಹಬ್ಬ.

ಸ್ವಾಮಿಗಳವರ ಅನುಗ್ರಹ ಭಾಷಣ. ಶ್ರೀಮನ್ ಮಹಾರಾಜರ ಪ್ರಾರಂಭೋತ್ಸವ ಭಾಷಣ. ಸ್ತಪತಿಯವರ ಕಾರ್ಯವರದಿಗಳು ಅಂದಿನ ಇತಿಹಾಸದ ಮೈಲಿಗಲ್ಲು.

ಸ್ತಪತಿಯವರು, ತಮ್ಮ ತಂದೆಯವರು ಹಾಗೂ ಸಂಸ್ಥೆಯ ಅಧ್ಯಕ್ಷರು ಆದ ಸಿದ್ಧಲಿಂಗ ಸ್ವಾಮಿಗಳವರ ಅಪೇಕ್ಷೆಯಂತೆ ಗುರುಕುಲವನ್ನು ಉತ್ತಮ ಮಟ್ಟದಲ್ಲಿ ಬೆಳೆಸಬೇಕೆಂಬ ಹಂಬಲವುಳ್ಳವರಾಗಿದ್ದರು. ಗುರುಕುಲದ ಒಳಭಾಗದಲ್ಲಿ ಅರವತ್ತ ಮೂರು ಪುರಾತನರ ಹೆಸರಿನಲ್ಲಿ ಮಂಟಪ ಸಿದ್ಧಪಡಿಸಿ ಮೂರ್ತಿಗಳನ್ನು ಸ್ಥಾಪಿಸ ಬೇಕೆಂದು ನೂರಾ ಒಂದು ವಿಗ್ರಹಗಳ ಸುತ್ತಾ ಇರುವ ಸ್ಥಳವನ್ನು ಭಕ್ತ ಜನರು ಕುಳಿತು ಧ್ಯಾನಿಸುವಂತೆ ಉತ್ತಮಗೊಳಿಸಬೇಕೆಂದು, ಹಾಗೆಯೇ ಬಡ ವಿದ್ಯಾರ್ಥಿಗಳಿಗೆ ಉಚಿತ ವಸತಿ. ಪ್ರಸಾದದ ವ್ಯವಸ್ಥೆಯನ್ನು ಹಾಗೂ ಅಲ್ಲಿ ಬೋದಿಸುವ ಕಲಾಶಿಕ್ಷಕರಿಗೆ, ಶಿಲ್ಪಿಗಳಿಗೆ ವಸತಿಗೆ ಅನುಕೂಲ ಮಾಡಿಕೊಡಬೇಕೆಂದು ಮಹದಾಸೆ ಇಟ್ಟು ಕೊಂಡಿದ್ದರು. ತಾನೊಂದು ಬಗೆದರೇ ದೈವ ತಾನೊಂದು ಬಗೆವುದು ಎಂಬ ಹಿರಿಯರ ಅನುಭವದ ನುಡಿಯಂತೆ, ಎಲ್ಲಾ ಕೆಲಸ ಕಾರ್ಯಗಳಿಗೂ

ಚೈತನ್ಯದಾಯಕವಾಗಿ ಪ್ರೋತ್ಸಾಹಿಸುತ್ತಿದ್ದ ಪೂಜ್ಯ ಸ್ವಾಮಿಗಳು ಗುರುಕುಲ ಪ್ರಾರಂಭವಾದ ಮೂರು ವರ್ಷಗಳಲ್ಲಿಯೇ ಶಿವಸಾಯುಜ್ಯ ಹೊಂದಿದುದು ಬಹು ದೊಡ್ಡ ಆಘಾತವಾಯಿತು. ಕಲಾಚೇತನವೊಂದು ಕಳಚಿ ಬಿದ್ದಂತಾಯಿತು. ಅದೇ ಸಂದರ್ಭದಲ್ಲಿಯೇ ಕಾಮ ಕಾಮೇಶ್ವರಿ ದೇವಾಲಯದ ಕೆಲಸಗಳು ಪೂರ್ಣಗೊಳ್ಳುತ್ತಾ ಬಂದಿದ್ದವು. ಅದರ ಉದ್ಘಾಟನಾ ಕಾರ್ಯವು ಸಹ ನೆರವೇರಿರಲಿಲ್ಲ. ಕೆಲಸದೊತ್ತಡ ಅಧಿಕವಾಗಿತ್ತು.

ಗದ್ದುಗೆಗೊದಿಗಿದ ವಿಪತ್ತು

ಸ್ವಾಮಿಗಳವರನ್ನು ಸಮಾದಿ ಮಾಡಿದ ಸ್ಥಳದಲ್ಲಿ ಅಂದರೇ ಗುರುಕುಲದ ಆವರಣದೊಳಗೆ ಒಂದು ಸುಂದರವಾದ ಗದ್ದುಗೆ ಮಾಡಬೇಕೆಂದು ಕಾರ್ಯೋನ್ಮುಖರಾದರು. ಸಾಕಾಷ್ಟು ಕೆಲಸವು ಅಂದರೇ ಎತ್ತರವಾದ ಪೀಠ ಅದಕ್ಕೊಂದು ಮಂಟಪ, ಗೋಪುರಗಳು ಸಹ ನಡೆದವು. ಕಳಸ ಮತ್ತು ಸ್ವಾಮಿಗಳವರ ವಿಗ್ರಹವೊಂದು ಆಗಬೇಕಿತ್ತು. ಸತ್‌ಕಾರ್ಯಕ್ಕೆ ಶತವಿಘ್ನ ಎಂಬ ನಾಣ್ನುಡಿಯಂತೆ ಅಘಟಿತ ಘಟನೆಗಳು ಮೇಲಿಂದ ಮೇಲೆ ಒದಗಿ ಸ್ತಪತಿಯವರನ್ನು ಮಾನಸಿಕವಾಗಿ ಹಿಂಸಿಸಿದವು.

ದೈವಶಕ್ತಿ

ಜಗನ್ ನಿಯಾಮಕ ನಾಟಕದಲ್ಲಿ ಯಾವುದೂ ಶಾಶ್ವತವಲ್ಲ. ಒಮ್ಮೆ ಊರ್ಧ್ವ ಮುಖವಾದರೇ ಮತ್ತೊಮ್ಮೆ ಅದೋಮುಖ ಏರಿದುದು ಇಳಿಯಲೇಬೇಕು. ಇದು ಸೃಷ್ಟಿ ನಿಯಮ. ಜಗನ್‌ಮಾತೆ ಭೂದೇವಿ ಹಲವು ಅಂತಸ್ತುಗಳಿಗೆ ಅಡಿಪಾಯಳಾಗಿ ನಿಂತಿರುವವಳು ಅವಳೇ, ಹಾಗೆಯೇ ಅವೆಲ್ಲವನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಳ್ಳುವವಳು ಅವಳೇ, ಪ್ರತಿಯೊಂದಕ್ಕೂ ಆಯುಃ ಪ್ರಮಾಣವಿರುತ್ತದೆ. ಅದನ್ನು ಮೀರುವಂತಿಲ್ಲ.

ಆ ಪ್ರಮಾಣವೆಷ್ಟು ಎಂಬುದನ್ನು ಯಾರು ಅರಿಯಲು ಸಾಧ್ಯವಿಲ್ಲ. ಅವೆಲ್ಲವೂ ನಡೆಯುವ ಪ್ರಕ್ರೀಯೆಗಳು. ಅವುಗಳಿಗೆ ಕಾರ್ಯಾ ಕಾರಣಗಳು ತಾಳೆಯಾಗುತ್ತಾ ಆರೋಹಣ ಮತ್ತು ಅವರೋಹಣಕ್ಕೆ ಚಾಲನೆ ನೀಡುತ್ತದೆ. ಇಂತಹದೊಂದು ದೃಷ್ಟಾಂತವನ್ನು ಕಾಣಬಹುದಾದದ್ದು ಗುರುವಿಲ್ಲದ ಕುಲದಂತಾಗಿರುವ ಗುರುಕುಲದಲ್ಲಿ. ಸಿದ್ಧಲಿಂಗ ಸ್ವಾಮಿಗಳವರ ಮಹೊನ್ನತ ಆಸೆಗಳನ್ನು ನೆರವೇರಿಸುವ ಪ್ರಯತ್ನ ಸ್ತಪತಿಯವರಿಂದ ನಾನಾವಿಧದಲ್ಲಿ ನಡೆದವಾದರೂ ಪರಿಣಾಮಕಾರಿಯಾದ ಪ್ರಯೋಜನವಾಗಲಿಲ್ಲ.

ಸಾಥ್ವಿಕ ಗುಣ

ಸ್ತಪತಿಯುವರ ಸಾಥ್ವಿಕ ಗುಣವನ್ನು ದುರುಪಯೋಗ ಮಾಡಿಕೊಂಡವರು ಅನೇಕ. ಇವರ ಹಿರಿಯ ಗುಣವೆಂದರೇ ಎಂದೂ ಯಾರಿಗೂ ಯಾವ ಸಂದರ್ಭದಲ್ಲಿಯೂ ಕಟುವಾಗಿ ಮಾತನಾಡುತ್ತಿರಲಿಲ್ಲ. ಇತರರು ಕೊಪೋದ್ರಿಕ್ತರಾಗಿ ವರ್ತಿಸಿದಾಗಲೂ, ಅಪರಿಮಿತವಾದ ಅನ್ಯಾಯವನ್ನು ಮಾಡಿದಾಗಲೂ, ತಮಗಾದ ನೋವನ್ನು ಮಾತುಗಳಿಂದ ಹೊರಹಾಕುತ್ತಿರಲಿಲ್ಲ. ತಮ್ಮಷ್ಟಕ್ಕೆ ತಾವೇ ಅಂತರ ಮುಖಿಗೊಳಿಸಿ ಕೊಳ್ಳುತ್ತಿದ್ದರು. ಕಲಾದೇವಿಯ ಆರಾಧನೆಯಲ್ಲಿ ತೊಡಗಿ ಹೃದಯಾಂತರಾಳದ ನೋವನ್ನು ಆ ದೇವಿಗೆ ಸಮರ್ಪಿಸುತ್ತಿದ್ದರು. ಮೃದು ಭಾಷೆ, ಮೆದುನಡೆ, ಸತ್ಯಾಸತ್ಯತೆಯನ್ನರಿಯದೇ ನಂಬುವುದು. ಇನ್ನಿತರ ವ್ಯಾವಹಾರಿಕ ವಿಷಯಗಳ ಚಿಂತನೆಗಳಿಂದ ದೂರ. ಕಲ್ಗೆತ್ತನೆಯಲ್ಲೋ ಚಿತ್ರ ರಚನೆಯಲ್ಲೊ ತೊಡಗಿದರೆ ಮುಗಿಯಿತು, ತಾವಾಯಿತು, ತಮ್ಮ ಕೆಲಸವಾಯಿತು.

ಸ್ತಪತಿಯವರು ಪ್ರಶಸ್ತಿಗಾಗಿ ಪರದಾಡಿದವರಲ್ಲ. ಅದಕ್ಕಾಗಿ ಪ್ರದರ್ಶನಗಳಿಗಾಗಿ ಚಿತ್ರ ಶಿಲ್ಪಗಳನ್ನು ಕಳಿಸಿದವರಲ್ಲ. ಅವುಗಳ ಬಗ್ಗೆ

ಯೋಚಿಸುವುದಕ್ಕಾದರೂ ಬಿಡುವುಬೇಕಲ್ಲ? ಅವರು ಮಾಡುವ ಒಂದೊಂದು ಕೃತಿಯು ಖಾಯಂ ಪ್ರದರ್ಶನವಾಗುತ್ತಿದ್ದವು. ಪ್ರದರ್ಶನ ಕೆಲವು ದಿನಗಳಿಗೆ ಮಾತ್ರ ಸೀಮಿತ, ದರ್ಶನ ಸದಾಕಾಲ ಸನ್ನಿಹಿತ ಎಂಬುದು ಅವರ ಮನದಿಂಗಿತವಾಗಿತ್ತು.

ಸ್ತಪತಿಯವರು ಸ್ವಂತಕ್ಕಾಗಿ ಏನೂ ಮಾಡಿಕೊಂಡವರಲ್ಲ. ಇದ್ದುದರಲ್ಲಿಯೇ ತೃಪ್ತಿ. ಮಕ್ಕಳನ್ನು ಪಡೆದ ಸಮೃದ್ಧ ಜೀವನ. ಸಾಧ್ವಿಮಣಿಯಾದ ಶ್ರೀಮತಿ ಲಲಿತಮ್ಮನವರು ಧರ್ಮಪತ್ನಿಯಾಗಿ ಪತಿಯ ಕಲಾಜೀವನಕ್ಕೆ ಶೋಭೆ ತಂದವರು. ಸ್ತಪತಿಯವರ ಈರ್ವರು ಪುತ್ರರಾದ ಎನ್. ಶಿವಾನಂದ ಮತ್ತು ಎನ್. ಶಿವಪ್ರಕಾಶ್ ಕ್ರಮವಾಗಿ ಬಿ.ಎಸ್.ಸಿ ಮತ್ತು ಬಿ.ಎ. ಪದವಿದರರಾಗಿದ್ದಾರೆ.

ಸ್ತಪತಿಯವರಿಗಾದರೋ ತಮ್ಮ ಮಕ್ಕಳು ಸರ್ಕಾರಿ ನೌಕರಿಯಲ್ಲಿ ಕೆಲಸ ದೊರಕಿಸಿಕೊಂಡು ಉನ್ನತಾಧಿಕಾರ ಹೊಂದಬೇಕೆಂಬ ಆಸೆಯುಳ್ಳವರಾಗಿದ್ದರು. ಆದರೇ ರಕ್ತಗತವಾದ ಕಲೆ ಅವರುಗಳನ್ನು ಮತ್ತೆ ತಮ್ಮ ಪಾರಂಪರಿಕ ವೃತ್ತಿಯ ಕಡೆಗೆ ಕರೆದೊಯ್ಯಿತು. ಹಿರಿಯ ಪುತ್ರ ಎನ್. ಶಿವಾನಂದ ಅವರು ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳ ಸ್ಮಾರಕ ಶಿಲ್ಪಕಲಾ ಕೇಂದ್ರವನ್ನು (1972) ಸ್ಥಾಪಿಸಿ ಹಲವಾರು ಶಿಲ್ಪಿಗಳಿಗೆ ಆಶ್ರಯದಾತರಾಗಿ ಹಿಂದಿನ ಸತ್ ಪರಂಪರೆಯನ್ನು ಉಳಿಸಿ ಬೆಳಸುತ್ತಿದ್ದಾರೆ. ಅವರ ತಮ್ಮ ಶಿವಪ್ರಕಾಶ ಕೂಡಾ ಶಿಲಾನ್ಯಾಸಗಳ ಕೆತ್ತನೆ ಅಂದರೇ ಕಲ್ಲಿನ ಮೇಲೆ ಅಕ್ಷರಗಳ ಮೂಡಿಸುವಿಕೆ ಕೆಲಸವನ್ನು ಮಾಡುವ ಮೂಲಕ ಜನಪ್ರಿಯರಾಗಿದ್ದಾರೆ.

ಸ್ತಪತಿಯವರು ಯಾವುದನ್ನು ಬಯಸದಿದ್ದರೂ ಅನೇಕ ಕಲಾ ಸಂಸ್ಥೆಗಳು, ಮಠ ಮಾನ್ಯಗಳು ಗೌರವಿಸಿವೆ. ಅವರು ಮಾಡಿಕೊಟ್ಟು ಶಿಲ್ಪಗಳ ಪ್ರತಿಷ್ಠಾಪನ ಸಂದರ್ಭದಲ್ಲಿ, ಮತ್ತಿತರ ಸಾರ್ವಜನಿಕ ಸಂದರ್ಭಗಳಲ್ಲಿ ಹೊದಿಸಿದ ಶಾಲುಗಳಿಗೆ, ಅರ್ಪಿಸಿದ ಗೌರವ ಪತ್ರಗಳಿಗೆ ಲೆಕ್ಕವಿಲ್ಲ.

ವಿಧಾನಸೌದ ಅಲಂಕರಣ ಸಮಿತಿ ಸದಸ್ಯರಾಗಿ, ಮುಖ್ಯಸ್ಥರಾಗಿ ಮತ್ತು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬೋರ್ಡ್‌ನ ಸದಸ್ಯರಾಗಿ 1960ರ ವರೆಗೆ ಸೇವೆ ಸಲ್ಲಿಸಿದ್ದಾರೆ.

ಈಗಿನ ಹಾಗೆ ಪ್ರಶಸ್ತಿಗಳ ಸಂಖ್ಯೆ ಜಾಸ್ತಿ ಇರಲಿಲ್ಲ. ಅಕಾಡೆಮಿಗಳು ಹೆಚ್ಚಿನ ಪ್ರಮಾಣದಲ್ಲಿರಲಿಲ್ಲ. ಸೀಮಿತ ಚೌಕಟ್ಟಿನೊಳಗೆ ಕೆಲಸ ಮಾಡಬೇಕಾಗಿತ್ತು. ಮೈಸೂರು ಲಲಿತಕಲಾ ಅಕಾಡೆಮಿ ಪ್ರಶಸ್ತಿಯೇ ಉನ್ನತವಾದುದಾಗಿತ್ತು. 1965-66ನೇ ಸಾಲಿನ ಪ್ರಶಸ್ತಿಯನ್ನು ಶಿಲ್ಪಕ್ಕೆ ಸಂಬಂಧಿಸಿದಂತೆ ಶ್ರೀ ನಾಗೇಂದ್ರ ಸ್ತಪತಿಯವರಿಗೆ ಆಗಿನ ಹಣಕಾಸು ಸಚಿವರಾದ ಶ್ರೀ ರಾಮಕೃಷ್ಣ ಹೆಗಡೆಯವರು ನೀಡಿ ಪುರಸ್ಕರಿಸಿದರು. (1966)

ಅರಮನೆಯ ಅಂತಸ್ತನ್ನು ಮಹಾರಾಜರ ಸಾನಿಧ್ಯವನ್ನು, ಮುಖ್ಯಮಂತ್ರಿಯವರ ಸ್ನೇಹವನ್ನು ಕಂಡುಂಡ ಅನುಭವಿಸಿದ ನಾಗೇಂದ್ರ ಸ್ತಪತಿಯವರಿಗೆ ಪ್ರಶಸ್ತಿಗಳು ಬಹುಮಾನಗಳು ಕ್ಷಣಿಕವಾಗಿದ್ದವು. ಜನ ತಾವಾಗಿಯೇ ಗೌರವಿಸುವುದಕ್ಕಿಂತ ಹೆಚ್ಚಿನ ಪ್ರಶಸ್ತಿ ಇದೆಯೇ? ಎಂಬುದು ಅವರ ಪ್ರಶ್ನೆಯಾಗಿತ್ತು.

ನಾವು ರಚಿಸುವ ಕಲೆ ಶಿಲ್ಪಾದಿಗಳು ಸುಕೃತಿಯನ್ನು ನೀಡುವಂತಾಗಬೇಕು. ವಿಕೃತಿ ತೋರಬಾರದು. ಸಂಸ್ಕೃತಿಯ ಪ್ರತೀಕವಾಗಿ ಜನಹಿತವಾಗುವಂತೆ ರಚಿಸುವುದು ಮಾತ್ರ ದೀರ್ಘಕಾಲ ಬಾಳಬಲ್ಲದು. ಇದಕ್ಕೆ ಬೇಲೂರು, ಹಳೇಬೀಡು ಸೋಮನಾಥಪುರ ಮುಂತಾದ ವೈವಿಧ್ಯಮಯ ಶಿಲ್ಪಗಳೇ ಪ್ರತ್ಯಕ್ಷ ಸಾಕ್ಷಿಯಾಗಿವೆಯೆಂಬ ಸದಭಿಪ್ರಾಯ ಹೊಂದಿದ್ದ ಸ್ತಪತಿಯವರು ತಮ್ಮ 59 ವಯಸ್ಸಿನಲ್ಲಿಯೇ (4-7-1972) ವಿಧಿ ವಶರಾದದ್ದು, ಚಿತ್ರ ಶಿಲ್ಪಾದಿಗಳ ಸತ್ ಸಂಸ್ಕೃತಿಯ ಪರಂಪರೆಯ ಚೈತನ್ಯಮಯ ವ್ಯಕ್ತಿಯನ್ನು ಕಳೆದುಕೊಂಡು ಕಲಾದೇವಿ ಬಡವಾಯಿತೆಂದೆನಿಸಿದರೂ, ಮಕ್ಕಳು ಮುಂದುವರೆಸುತ್ತಿರುವುದು ಸಂತೋಷದಾಯಕವಾದ ವಿಚಾರ.

ಶಿಲ್ಪಕಲಾ ಅಕಾಡೆಮಿಯ ಪ್ರಕಟಣೆಗಳು

ಜಕಣಾಚಾರ್ಯ	-	ಮೂಲ : ಸಿ.ಕೆ. ನಾಗರಾಜರಾವ್ ಸಂಗ್ರಹ : ಶ್ರೀಮತಿ ಸರಿತಾಜ್ಞಾನಾನಂದ ಬೆಲೆ ರೂ. ೪೦-೦೦
ಶಿಲ್ಪ ಸಂಕುಲ	-	ಪಿ.ಆರ್. ತಿಪ್ಪೇಸ್ವಾಮಿ ಬೆಲೆ ರೂ. ೨೫-೦೦
ಕಲಾರಾಧನೆ	-	ಮೂಲ : ಡಾ. ಕೊಂಡೂರು ವೀರರಾಘವಾಚಾರ್ಯುಲು ಅನುವಾದ: ಶ್ರೀಮತಿ ಸರಿತಾಜ್ಞಾನಾಂದ ಬೆಲೆ ರೂ. ೨೫-೦೦
ಹೊಯ್ಸಳ ಶಿಲ್ಪಕಲೆ (ಶಿಲ್ಪ ಸಂಪುಟ)	-	ಗೌ. ಸಂಪಾದಕ : ಎನ್. ಮರಿಶಾಮಾಚಾರ್ ಬೆಲೆ ರೂ. ೫೦-೦೦
ಶ್ರೀ ಕಾಶ್ಯಪ ಶಿಲ್ಪಶಾಸ್ತ್ರಂ	-	ಜಿ. ಜ್ಞಾನಾನಂದ ಬೆಲೆ ರೂ. ೪೫೦-೦೦
ಶಿಲ್ಪಬ್ರಹ್ಮ	-	ಸಿ. ಪರಮೇಶ್ವರಾಚಾರ್ಯ - ಡಾ॥ ಅ.ಲ. ನರಸಿಂಹನ್ ಬೆಲೆ ರೂ. ೧೫-೦೦
ಉತ್ತುಂಗ ಕುಶಲಶಿಲ್ಪಿ ದೇವಲಕುಂದ ವಾದಿರಾಜ್		- ಕನಕಾಮೂರ್ತಿ ಬೆಲೆ ರೂ. ೧೫-೦೦

ಮೇಲ್ಕಂಡ ಪುಸ್ತಕಗಳಿಗೆ ಶೇ ೫೦ರಷ್ಟು ರಿಯಾಯಿತಿ ಇರುವುದು.

೧) ಶಿಲ್ಪ ಸಿದ್ಧಾಂತ ಶ್ರೀ ಸಿದ್ಧಲಿಂಗ ಸ್ವಾಮಿಗಳು
ಬೆಲೆ ರೂ. ೫೦-೦೦

೨) ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು
ಶಿಲ್ಪ-ಚಿತ್ರ ಸಂಪುಟ - ರೂ. ೫೦-೦೦

೩) ಸಾತ್ವಿಕ ಶಿಲ್ಪಿ ನಾಗೇಂದ್ರ ಸ್ಥಪತಿ
- ರೂ. ೧೫-೦೦